ಸಂಪುಟ : 9 ಸಂಚಿಕೆ 09 ಪುಟ : 4 ಬೆಲೆ : 3.00 ರವಿವಾರ ಫೆಬ್ರುವರಿ 4, 2024 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 9 Issue : 09 Pages : 4 Price : 3.00 sunday February 4, 2024 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಇಂದಿನ ನೀರು ಪೂರೈಕೆ ವಿವರ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ಫೆಬ್ರವರಿ 4 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

ಸ್ಥಳಗಳ ವಿವರ : ವಾರ್ಡ್ ನಂ. 11,12 ನಿಸರ್ಗ ಬಡಾವಣೆ. ವಾರ್ಡ್ ನಂ. 16,18,19 ಮಡಿವಾಳ ದೇವಸ್ಥಾನ, ಕುಂಬಾರ ಓಣಿ ಹೊಸ ಲೈನ್, ಬಾಗಲಕೋಟಿ ಲೈನ್, ಅಂಬೇಡ್ಕರ ನಗರ, ಕೂನೇರಿ ಹೊಂಡ, ಹನುಮಂತ ದೇವರ ಗುಡಿ ಲೈನ್.

ವಾರ್ಡ್ ನಂ. 27, 30 ಕಾಶಿ ವಿಶ್ವನಾಥ ನಗರ, ಅಸೂಟಿ ಅವರ ಲೈನ್, ಹನುಮಂತ ದೇವರ ಗುಡಿ ಲೈನ್, ದುರಗಮ್ಮ ಗುಡಿ ಲೈನ್, ಕಣವಿಯವರ ಲೈನ್, ಮಾಕೋಟೇಶ್ವರ ಲೈನ್, ಟಿವಿಎಸ್ ಸ್ಟೋರ್, ಅಬ್ಬಿಗೇರಿ ಲೇಔಟ್, ಮುತ್ತಿನಪೆಂಡಿಯವರ ಲೈನ್, ಪೊಲೀಸ್ ಕ್ವಾರ್ಟರ್ಸ್, ಎಸ್ ಪಿ. ಆಫೀಸ್, ರೋಣದ ಲೈನ್.

ವಾರ್ಡ್ ನಂ. 5, 7 ಶಿವಾಜಿ ನಗರ ಭಾಗ –1,2,3,4 ರಂಗಪ್ಪಜ್ಜನ ಮಠ ಭಾಗ –1,2.

ಈಗಾಗಲೇ ಕುಡಿಯುವ ನೀರಿನ ನಳ ಹೊಂದಿರುವ ಬಾಕಿದಾರರ ಪಟ್ಟಿ ತಯಾರಿಸಿದ್ದು, ನಾಗರಿಕರು ಕೂಡಲೇ ತಮ್ಮ ಕುಡಿಯುವ ನೀರಿನ ಬಾಕಿ ಕರವನ್ನು ಸಂದಾಯ ಮಾಡುವಂತೆ ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅರ್ಜಿ ಆಹ್ವಾನ

■ವಿಜಯಸಾಕ್ಷಿ ಸುದ್ದಿ, ಗದಗ

2023–24ನೇ ಸಾಲಿನ ಯುವ ಚೈತನ್ಯ ಕಾರ್ಯಕ್ರಮದಡಿ ಅರ್ಹ ಯುವ ಸಂಘಗಳಿಗೆ ಕ್ರೀಡಾ ಕಿಟ್ ವಿತರಣೆ ಮಾಡಲು ಅರ್ಹ ಯುವ ಸಂಘಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಯುವ ಸಂಘಗಳು ಫೆಬ್ರವರಿ 5 ರೊಳಗಾಗಿ ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕೆ.ಎಚ್. ಪಾಟೀಲ ಜಿಲ್ಲಾ ಕ್ರೀಡಾಂಗಣ, ಗದಗ, ಇಲ್ಲಿ ಲಿಖಿತವಾಗಿ ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಜಿ ಸಲ್ಲಿಸುವ ಯುವ ಸಂಘಗಳು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ಕಡ್ಡಾಯವಾಗಿ ನೋಂದಣಿಯಾಗಿರಬೇಕು. ನೋಂದಣಿಯಾದ ಬಗ್ಗೆ ನೋಂದಣಿ ಪ್ರಮಾಣಪತ್ರವನ್ನು ಸಲ್ಲಿಸತಕ್ಕದ್ದು. ನೋಂದಣಿ ಪ್ರಮಾಣ ಪತ್ರವು ಸೇವಾ ಸಿಂಧು ಮೂಲಕ ನವೀಕರಣಗೊಂಡಿರಬೇಕು. ಒಂದು ವರ್ಷದ ಒಳಗಿನ ಅವಧಿಯಲ್ಲಿ ಯುವ ಸಂಘಗಳು ಆಯೋಜಿಸಿದ ಕಾರ್ಯಕ್ರಮಗಳ ಫೋಟೋ, ಇತ್ಯಾದಿ ದಾಖಲೆ ಲಗತ್ತಿಸುವುದು. ಹೆಚ್ಚಿನ ಮಾಹಿತಿಗಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿ ದೂರವಾಣಿ ಸಂಖ್ಯೆ 08372–238345 ಸಂಪರ್ಕಿಸಬಹುದಾಗಿದೆ.

## ಫೆ. 8 ರಿಂದ ಗದಗ ತಾಲೂಕಿನಲ್ಲಿ ಸಂವಿಧಾನ ಜಾಗೃತಿ ಜಾಥಾ

■ವಿಜಯಸಾಕ್ಷಿ ಸುದ್ದಿ, ಗದಗ

ಸಂವಿಧಾನ ದಿನಾಚರಣೆಯ ಪ್ರಯುಕ್ತ ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮವು ಫೆಬ್ರವರಿ 8ರಿಂದ 12 ರವರೆಗೆ ಗದಗ ತಾಲೂಕಿನ ಗ್ರಾಮ ಪಂಚಾಯತ್‌ಗಳಲ್ಲಿ ಹಮ್ಮಿಕೊಳ್ಳಲಾಗಿದೆ.

ಫೆಬ್ರವರಿ 8 ರಂದು ಬೆಳಿಗ್ಗೆ 9.00 ಗಂಟೆಗೆ ಕೋಟುಮಚಗಿ, ಕಣಗಿನಹಾಳ, ಹಾತಲಗೇರಿ, ಲಕ್ಕುಂಡಿ, ಫೆಬ್ರವರಿ 9 ರಂದು ಹರ್ಲಾಪೂರ, ತಿಮ್ಮಾಪೂರ, ಅಡವಿಸೋಮಾಪೂರ, ಕಳಸಾಪೂರ, ನಾಗಾವಿ, ಬೆಳದಡಿ, ಫೆಬ್ರವರಿ 10ರಂದು ಬಿಂಕದಕಟ್ಟಿ, ಅಸುಂಡಿ, ಹುಲಕೋಟಿ, ಕುರ್ತಕೋಟಿ, ಅಂತೂರು–ಬೆಂತೂರ, ಬೆಳಹೋಡ, ಫೆಬ್ರವರಿ 11 ರಂದು ಚಿಕ್ಕಹಂದಿಗೋಳ, ನೀರಲಗಿ, ಹುಯಿಲಗೋಳ, ಹರ್ತಿ, ಫೆಬ್ರವರಿ 12 ರಂದು ಮುಳಗುಂದ, ಚಿಂಚಲಿ, ಯಲಿಶಿರೂರು, ಹಾಗೂ ಸೊರಟೂರು, ಮಾರ್ಗದಲ್ಲಿ ಸದರಿ ಜಾಥಾ ಸಾಗಲಿದೆ. ಸದರಿ ಕಾರ್ಯಕ್ರಮವನ್ನು ಗ್ರಾಮ ಪಂಚಾಯತ ಸಹಯೋಗದಲ್ಲಿ ಗ್ರಾಮದ ಪ್ರಮುಖ ಸ್ಥಳಗಳಲ್ಲಿ ಹಮ್ಮಿಕೊಳ್ಳಲಾಗಿದೆ.

ಗ್ರಾಮಗಳ ಗುರು ಹಿರಿಯರು, ಸಮಾಜದ ಮುಖಂಡರು, ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು, ಇತರೆ ಇಲಾಖೆಯ ಅಧಿಕಾರಿಗಳು ಹಾಗೂ ಶಾಲಾ ಮುಖ್ಯೋಪಾಧ್ಯಯರು ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಲು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ನೂತನ ಬಸ್ ಲೋಕಾರ್ಪಣೆ, ಚಾಲಕರಿಗೆ ಬೆಳ್ಳಿ ಪದಕ ವಿತರಣೆ ಕಾರ್ಯಕ್ರಮದಲ್ಲಿಸಚಿವ ರಾಮಲಿಂಗಾ ರೆಡ್ಡಿ

# ಬಸ್ ನಿಲ್ದಾಣಗಳ ನಿರ್ವಹಣೆ ಅಧಿಕಾರಿಗಳ ಜವಾಬ್ದಾರಿ

■ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯದ ಜನತೆಗೆ ಉತ್ತಮ ಹಾಗೂ ಸುರಕ್ಷಿತ ಸಾರಿಗೆ ವ್ಯವಸ್ಥೆ ಒದಗಿಸುವ ನಿಟ್ಟಿನಲ್ಲಿ 325 ನೂತನ ಬಸ್ ಖರೀದಿಗೆ ಸದ್ಯದಲ್ಲೇ ಕ್ರಮವಹಿಸುವದಲ್ಲದೆ, ಒಟ್ಟಾರೆ 5000 ಬಸ್ ಖರೀದಿಗೆ ಉದ್ದೇಶ ಹೊಂದಲಾಗಿದೆ ಎಂದು ರಾಜ್ಯ ಸಾರಿಗೆ ಹಾಗೂ ಮುಜರಾಯಿ ಸಚಿವ ರಾಮಲಿಂಗಾ ರೆಡ್ಡಿ ಹೇಳಿದರು.

ನಗರದ ಹೊಸ ಬಸ್ ನಿಲ್ದಾಣದಲ್ಲಿ ಶನಿವಾರ, 50 ನೂತನ ಬಸ್‌ಗಳ ಲೋಕಾರ್ಪಣೆ, ಅಪಘಾತ ರಹಿತ ಸೇವೆ ಸಲ್ಲಿಸಿದ ಚಾಲಕರಿಗೆ ಬೆಳ್ಳಿ ಪದಕ ವಿತರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕಳೆದ ನಾಲ್ಕು ವರ್ಷಗಳಿಂದ ಹೊಸ ಬಸ್‌ಗಳ ಖರೀದಿ ಹಾಗೂ 7 ವರ್ಷಗಳಿಂದ ನೇಮಕಾತಿಗಳು ನಡೆದಿರಲಿಲ್ಲ. ಸದ್ಯ ನಮ್ಮ ಸರ್ಕಾರ 9 ಸಾವಿರ ಹುದ್ದೆ ನೇಮಕಾತಿಗೆ ಅನುಮತಿ ನೀಡಿದ್ದು, ನೇಮಕಾತಿ ಜವಾಬ್ದಾರಿಯನ್ನು ಆಯಾ ವಿಭಾಗೀಯ ಸಂಸ್ಥೆಗಳಿಗೆ ನೀಡಲಾಗಿದೆ. ಈಗಾಗಲೇ 145 ಜನರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲಾಗಿದೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ನಗದು ರಹಿತ ಬಸ್ ಸೇವೆಗೆ ಚಾಲನೆ ನೀಡಿ ಮಾತನಾಡಿ, ನಗರದ ಹೊಸ ಬಸ್ ನಿಲ್ದಾಣದಲ್ಲಿ ಸಾರ್ವಜನಿಕರಿಗೆ ಔಷಧಿ, ಪುಸ್ತಕ ವ್ಯವಸ್ಥೆ, ರೈಲ್ವೆ ಟಿಕೆಟ್ ಬುಕ್ಕಿಂಗ್ ವ್ಯವಸ್ಥೆ ಸೇರಿದಂತೆ ಅಗತ್ಯ ವಸ್ತುಗಳು ಇಲ್ಲೇ ಸಿಗುವಂತಾಗಬೇಕು. ವಿಮಾನ ನಿಲ್ದಾಣದಲ್ಲಿ ಸಿಗುವ ವ್ಯವಸ್ಥೆಯಂತೆ ಬಸ್ ನಿಲ್ದಾಣದಲ್ಲಿಯೂ ಸಿಗುವಂತಾಗಬೇಕು. 25 ಲಕ್ಷ ರೂ. ವೆಚ್ಚ ಮಾಡಿದಲ್ಲಿ ಈ ನಿಲ್ದಾಣವು ಭವ್ಯವಾಗಲಿದೆ. ಈ ಕುರಿತು ಅಧಿಕಾರಿಗಳು ಗಮನಹರಿಸುವಂತೆ ಸೂಚಿಸಿದರು.

ವಾ.ಕ.ರ.ಸಾ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕ ಭರತ್.ಎಸ್ ಮಾತನಾಡಿ, ಶಕ್ತಿ ಯೋಜನೆಯನ್ನು ವಿಭಾಗದ ಆರು ಜಿಲ್ಲೆಗಳಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ. ಇಲ್ಲಿಯವರೆಗೆ ಹುಬ್ಬಳ್ಳಿ ವಿಭಾಗದ 6 ಜಿಲ್ಲೆಗಳಲ್ಲಿ ಅಂದಾಜು 34 ಕೋಟಿ ಜನ ಸಂಚರಿಸಿದ್ದಾರೆ. ರಾಜ್ಯದಲ್ಲಿ ಹೊಸ ಬಸ್ ಖರೀದಿಗೆ ಸರ್ಕಾರ 500 ಕೋಟಿ ರೂ. ಮೀಸಲಿಟ್ಟು ಸಂಸ್ಥೆಗೆ 150 ಕೋಟಿ ರೂ ನೀಡಿದೆ. ಈ ಪೈಕಿ ಮೊದಲ ಹಂತದ 20 ಕೋಟಿ ರೂ ವೆಚ್ಚದಲ್ಲಿ 50 ಬಸ್ ಖರೀದಿಸಲಾಗಿದೆ. ಸರ್ಕಾರ 20 ಸಾವಿರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮತಿ ನೀಡಿದ್ದು, ಅಪಘಾತ ರಹಿತ ಸೇವೆ ನಮ್ಮ ಸಂಸ್ಥೆಯ ಉದ್ದೇಶವಾಗಿದೆ. ಅಪಘಾತ ರಹಿತ ಸೇವೆ ಸಲ್ಲಿಸಿದ 48 ಚಾಲಕರಿಗೆ ಇಂದು ಬೆಳ್ಳಿ ಪದಕ ನೀಡಿ ಗೌರವಿಸಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಅಪಘಾತ ರಹಿತ ಸೇವೆ ಸಲ್ಲಿಸಿದ 48 ಚಾಲಕರಿಗೆ ಬೆಳ್ಳಿ ಪದಕ ವಿತರಣೆ ಮಾಡಲಾಯಿತು. ಮಾಜಿ ಶಾಸಕ ಡಿ.ಆರ್. ಪಾಟೀಲ, ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಎಂ, ಗದಗ ವಿಭಾಗೀಯ ನಿಯಂತ್ರಣಾಧಿಕಾರಿ ಸೀನಪ್ಪ, ಗಣ್ಯರುಗಳಾದ ಬಿ.ಬಿ. ಅಸೂಟಿ, ಗುರಣ್ಣ ಬಳಗಾನೂರ, ಸಿದ್ದು ಪಾಟೀಲ ಸೇರಿದಂತೆ ಸಾರಿಗೆ ಇಲಾಖೆ ಅಧಿಕಾರಿ/ಸಿಬ್ಬಂದಿಗಳು, ಸಾರ್ವಜನಿಕರು ಉಪಸ್ಥಿತರಿದ್ದರು. ಮುಖ್ಯ ಕಾರ್ಮಿಕ ಕಲ್ಯಾಣ ಅಧಿಕಾರಿ ಪಿ.ವಾಯ್. ನಾಯಕ ಸ್ವಾಗತಿಸಿದರು. ಮುಖ್ಯ ಸಂಚಾರಿ ವ್ಯವಸ್ಥಾಪಕ ವಿಶ್ವಜ್ ವಂದಿಸಿದರು.




ಸಾರಿಗೆ ಇಲಾಖೆಯಿಂದ ಗದಗ ಜಿಲ್ಲೆಗೆ ಕಡಿಮೆ ಕೆಲಸಗಳಾಗಿದ್ದು, ಜಿಲ್ಲೆಗೆ ಟ್ರಕ್ ಟರ್ಮಿನಲ್ ಅನ್ನು ಆದಷ್ಟು ಬೇಗ ಮಂಜೂರು ಮಾಡಬೇಕು ಎಂದು ಸಚಿವ ರಾಮಲಿಂಗ ರೆಡ್ಡಿ ಅವರಿಗೆ ಎಚ್.ಕೆ. ಪಾಟೀಲ ಮನವಿ ಮಾಡಿದರು. ಗದಗ ನಗರದಲ್ಲಿ ಕೆಲವಡೆ ಮಿನಿ ಬಸ್ ನಿಲ್ದಾಣಗಳನ್ನು ಮಂಜೂರು ಮಾಡಲು, ವಿಭಾಗೀಯ ಚಾಲಕ ತರಬೇತಿ ಕೇಂದ್ರ, ಅಶ್ವಮೇಧ ಬಸ್ ವ್ಯವಸ್ಥೆ, ಇನ್ನೂ ಹೆಚ್ಚಿನ ಬಸ್ ವ್ಯವಸ್ಥೆ ಮಂಜೂರು, ಲೈಸೆನ್ಸ್ ನೀಡುವ ಪ್ರಕ್ರಿಯೆ ಅತ್ಯಾಧುನೀಕರಣ, ಚಾಲನಾ ಪರವಾನಿಗೆ ನಿಡುವ ಕ್ಯಾಂಪ್‌ಗಳ ಆಯೋಜನೆ ಸೇರಿದಂತೆ ಹಲವು ಮನವಿಗಳನ್ನು ಸಚಿವ ಎಚ್.ಕೆ. ಮಾಡಿದರು.

ನಗರದಲ್ಲಿ ಸೂಕ್ತ ನಿವೇಶನ ಒದಗಿಸಿದಲ್ಲಿ ಸುಸಜ್ಜಿತ ಟ್ರಕ್ ಟರ್ಮಿನಲ್ ಮಂಜೂರು ಮಾಡಲಾಗುವುದು. ಮುಂಬರುವ ಆಯವ್ಯಯದಲ್ಲಿ ಈ ವಿಷಯ ಅಳವಡಿಸಲಾಗುವುದು. ಜಿಲ್ಲೆಗಳಲ್ಲಿ ಚಾಲನಾ ಪರವಾನಿಗೆ ನೀಡುವ ಕ್ಯಾಂಪ್‌ಗಳನ್ನು ಆಯೋಜಿಸಲು ಇಲಾಖಾ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ರಾಜ್ಯದಲ್ಲಿ ಸುಸಜ್ಜಿತ ಬಸ್ ನಿಲ್ದಾಣಗಳನ್ನು ನಿರ್ಮಾಣ ಮಾಡಲಾಗಿದೆ. ಅವುಗಳ ನಿರ್ವಹಣೆ ಮಾಡಬೇಕಾಗಿರುವುದು ಅಧಿಕಾರಿಗಳ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು.

**– ರಾಮಲಿಂಗಾ ರೆಡ್ಡಿ.**
ಸಾರಿಗೆ ಹಾಗೂ ಮುಜರಾಯಿ ಸಚಿವರು.




### ಕೆ.ಎಚ್. ಪಾಟೀಲ ಸ.ಪ್ರ.ದ ಕಾಲೇಜಿನಲ್ಲಿ ಪ್ರದರ್ಶನ ಉದ್ಘಾಟಿಸಿದ ಬಸವರಾಜ ಹೊರಟ್ಟಿ

# ಐತಿಹಾಸಿಕ ದಾಖಲೆ, ಛಾಯಾಚಿತ್ರಗಳ ಪ್ರದರ್ಶನ

■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ಪತ್ರಾಗಾರ ಇಲಾಖೆ, ಪ್ರಾದೇಶಿಕ ಪತ್ರಾಗಾರ ಇಲಾಖೆ ಧಾರವಾಡ ಹಾಗೂ ಕೆ.ಎಚ್. ಪಾಟೀಲ ಸರಕಾರಿ ಪ್ರಥಮ ದರ್ಜೆ ಕಾಲೇಜು ಹುಲಕೋಟಿ ಇವರುಗಳ ಸಹಯೋಗದಲ್ಲಿ ಹುಲಕೋಟಿಯ ಕೆ.ಎಚ್. ಪಾಟೀಲ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ಆಯೋಜಿಸಲಾಗಿದ್ದ ಮೂರು ದಿನಗಳ ಕರ್ನಾಟಕ ಏಕೀಕರಣ ಚಳುವಳಿ ಐತಿಹಾಸಿಕ ದಾಖಲೆಗಳ ಮತ್ತು ಛಾಯಾಚಿತ್ರಗಳ ಪ್ರದರ್ಶನವನ್ನು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಡಿ.ಆರ್. ಪಾಟೀಲ, ಪತ್ರಾಗಾರ ಇಲಾಖೆ ನಿರ್ದೇಶಕ ಗವಿಸಿದ್ದಯ್ಯ, ಹುಲಕೋಟಿಯ ಕೆ.ಎಚ್. ಪಾಟೀಲ ಸ.ಪ್ರ.ದ ಕಾಲೇಜಿನ ಪ್ರಾಚಾರ್ಯ ಶಿವಪ್ಪ ಕುರಿ, ಧಾರವಾಡ ಪ್ರಾದೇಶಿಕ ಪತ್ರಾಗಾರ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರಿ ಮಂಜುಳಾ ಯಲಿಗಾರ, ಗದಗ ತಹಸೀಲ್ದಾರ ಶ್ರೀನಿವಾಸಮೂರ್ತಿ ಕುಲಕರ್ಣಿ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಂ.ಎ. ರಡ್ಡೇರ, ಸ.ಪ್ರ.ದ ಕಾಲೇಜಿನ ಇತಿಹಾಸ ಪ್ರಾಧ್ಯಾಪಕ ಡಾ.ಅಪ್ಪಣ್ಣ ಹಂಜೆ, ಗಣ್ಯರಾದ ಜೆ.ಕೆ. ಜಮಾದಾರ, ಕಾಲೇಜಿನ ಬೋಧಕ, ಬೋಧಕೇತರ ಸಿಬ್ಬಂದಿಗಳು, ವಿದ್ಯಾರ್ಥಿಗಳು, ಉಪಸ್ಥಿತರಿದ್ದರು.




ಛಾಯಾಚಿತ್ರ ಪ್ರದರ್ಶನದಲ್ಲಿ ಕರ್ನಾಟಕದ ಬಗ್ಗೆ ರಾಜ ಪ್ರಮುಖರ ಅಭಿಪ್ರಾಯ, ಕರ್ನಾಟಕ ಪ್ರಾಂತ್ಯ ರಚನೆಗೆ ನೆಹರೂರವರ ಬೆಂಬಲ, ಬೊಂಬಾಯಿ ಶಾಸನ ಸಭೆಯಲ್ಲಿ ಕನ್ನಡ ಸದಸ್ಯರ ಗೈರು ಹಾಜರಿ, ಉಳುವವನಿಗೆ ಭೂಮಿ ಕೊಡಿಸುವ ಮಸೂದೆ ಪರಿಶೀಲನೆ, ಕರ್ನಾಟಕ ಕೀರ್ತಿ ಸ್ತಂಭ, ನವಭಾರತ–ಶಾಂತಿ ಮಾರ್ಗದಿಂದಲೇ ಏಕೀಕರಣ ಸಾಧನೆಯಾಗಬೇಕು, ಬೊಂಬಾಯಿ ಕನ್ನಡ ಶಾಲೆಯ ನೂತನ ಕಟ್ಟಡ, ಸರದಾರ ವೀರನಗೌಡರು ಶ್ರೀಮತಿ ನಾಗಮ್ಮನವರಿಗೆ ಬೆಳಗಾವಿ ಸೆಂಟ್ರಲ್ ಜೈಲಿನಿಂದ ಬರೆದ ಪತ್ರ, ಕೋರ್ಟುಗಳಲ್ಲಿ ಕನ್ನಡ, ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ, ನವಭಾರತ–ಕರ್ನಾಟಕ ಪ್ರಾಂತ್ಯ ರಚನೆ, ಕನ್ನಡದ ಉತ್ಸವ, ಬಿಜಾಪೂರ ನ್ಯಾಯಾಲಕ್ಕೆ ಬಾಬಾಸಾಹೇಬರ ಅವಿಸ್ಮರಣೀಯ ಭೇಟಿ ಸೇರಿದಂತೆ ಇನ್ನೂ ಅನೇಕ ಐತಿಹಾಸಿಕ ಛಾಯಾಚಿತ್ರಗಳನ್ನು ಪ್ರದರ್ಶಿಸಲಾಗಿದೆ.

### ಕುಸ್ತಿ ಸ್ಪರ್ಧೆಯಲ್ಲಿ

## ಕು. ಭುವನೇಶ್ವರಿ ಕೋಳಿವಾಡ ತೃತೀಯ ಸ್ಥಾನ



■ವಿಜಯಸಾಕ್ಷಿ ಸುದ್ದಿ, ಗದಗ

ದಿ: 26–01–2024ರಿಂದ 30–01–2024 ರವರೆಗೆ ಚೆನ್ನೈನಲ್ಲಿ ನಡೆದ 17 ವರ್ಷದ ಒಳಗಿನ ಖೇಲೋ ಇಂಡಿಯಾ ಯುಥ್ ಗೇಮ್ಸ್ ಕುಸ್ತಿ ಸ್ಪರ್ಧೆಯಲ್ಲಿ ಗದಗ ಜಿಲ್ಲೆಯ ಕ್ರೀಡಾ ವಸತಿ ನಿಲಯದ ಕುಸ್ತಿ ಕ್ರೀಡಾಪಟು ಕು. ಭುವನೇಶ್ವರಿ ಕೋಳಿವಾಡ ತೃತೀಯ ಸ್ಥಾನ ಪಡೆದುಕೊಂಡು ಗದಗ ಜಿಲ್ಲೆಗೆ ಕೀರ್ತಿ ತಂದಿದ್ದಾರೆ. ಸದರಿಯವರಿಗೆ ಹಾಗೂ ಕುಸ್ತಿ ತರಬೇತುದಾರರಾದ ವಿನಾಯಕ ಯಂಕಂಚಿ ಇವರಿಗೆ ರಾಜ್ಯ ಕಾನೂನು, ನ್ಯಾಯ ಮಾನವ ಹಕ್ಕುಗಳು ಸಂಸದೀಯ ವ್ಯವಹಾರ, ಪ್ರವಾಸೋದ್ಯಮ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್. ಕೆ. ಪಾಟೀಲ, ನಗರಸಭೆ ಅಧ್ಯಕ್ಷರಾದ ಉಷಾ ಮಹೇಶ ದಾಸರ, ಉಪಾಧ್ಯಕ್ಷೆ ಶ್ರೀಮತಿ ಸುನಂದಾ ಬಾಕಳೆ, ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಶರಣು ಗೋಗೇರಿ ಅಭಿನಂದಸಿದ್ದಾರೆ.

### ಹುಲ್ಲೂರು ಪ್ರೌಢಶಾಲೆಯಲ್ಲಿ ಉದ್ಯೋಗ ಖಾತ್ರಿ ಯೋಜನೆಯಡಿ ಊಟದ ಕೋಣೆ

# ಭೋಜನಾಲಯಕ್ಕೂ ಅನುದಾನ ಖಾತ್ರಿ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ತಾಲೂಕಿನ ಗ್ರಾಮೀಣ ಭಾಗದ ಸರ್ಕಾರಿ ಶಾಲೆಗಳ ಅಭಿವೃದ್ಧಿ ಹಾಗೂ ಮೂಲ ಸೌಕರ್ಯ ಕಲ್ಪಿಸಲು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ವರದಾನವಾಗಿದೆ. ಗ್ರಾಮೀಣ ಜನರಿಗೆ ಉದ್ಯೋಗ ನೀಡುವುದರ ಜತೆಗೆ ಶಾಲಾಭಿವೃದ್ಧಿಗೆ ಮುಂದಾಗಿರುವ ಕ್ರಮದ ಬಗ್ಗೆ ಗ್ರಾಮಸ್ಥರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಮೂಲಕ ತಾಲೂಕಿನ ವಿವಿಧ ಗ್ರಾಮಗಳಲ್ಲಿಯ ಶಾಲೆಗಳಿಗೆ ಶೌಚಾಲಯ, ಆಟದ ಮೈದಾನ, ಕಾಂಪೌಂಡ್, ಬಾಸ್ಕೆಟ್ ಬಾಲ್, ಕೋ–ಕೋ, ವಾಲಿಬಾಲ್, ಕಬ್ಬಡಿ ಮೈದಾನ ನಿರ್ಮಿಸಲಾಗಿದೆ. ನರೇಗಾ ಯೋಜನೆ ಅಡಿ ತಾಲೂಕಿನ ಹುಲ್ಲೂರು ಗ್ರಾಮದ ಪ್ರೌಢಶಾಲೆಯ ಆವರಣದಲ್ಲಿ 18 ಮೀಟರ್ ಉದ್ದ ಹಾಗೂ 7 ಮೀಟರ್ ಅಗಲದ ಭೋಜನಾಲಯ ನಿರ್ಮಿಸಲಾಗಿದೆ. ಇಲ್ಲಿ ಏಕಕಾಲಕ್ಕೆ 120–130 ವಿದ್ಯಾರ್ಥಿಗಳು ಕುಳಿತು ಊಟ ಮಾಡಬಹುದಾಗಿದ್ದು, 12 ಲಕ್ಷ ರೂ. ವೆಚ್ಚವಾಗಿದೆ.

ಭೋಜನಾಲಯ ನಿರ್ಮಾಣಕ್ಕೂ ಮುನ್ನ ಮಕ್ಕಳು ಶಾಲಾ ಕೊಠಡಿಗಳ ಮುಂದಿನ ಕಾರಿಡಾರ್‌ನಲ್ಲಿ ಕುಳಿತು ಊಟ ಮಾಡುತ್ತಿದ್ದರು. ಮಳೆಗಾಲ ಮತ್ತು ಬೇಸಿಗೆಯಲ್ಲಿ ಕಾರಿಡಾರ್‌ನಲ್ಲಿಯೂ ಕುಳಿತು ಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಇದರಿಂದ ಮಕ್ಕಳು ಸರಿಯಾಗಿ ಊಟ ಮಾಡಲು ಆಗುತ್ತಿರಲಿಲ್ಲ. ಇದನ್ನು ಮನಗಂಡ ಶಿಕ್ಷಕರು ಹಾಗೂ ಶಾಲಾಭಿವೃದ್ಧಿ ಸಮಿತಿಯವರು ಉದ್ಯೋಗ ಖಾತ್ರಿಯಲ್ಲಿ ಭೋಜನಾಲಯ ನಿರ್ಮಾಣಕ್ಕೆ ಇರುವ ಅವಕಾಶವನ್ನು ಸದುಪ ಯೋಗ ಪಡಿಸಿಕೊಂಡು ಮಕ್ಕಳ ಸ್ನೇಹಿ ಆಡಳಿತಕ್ಕೆ ಮುಂದಾಗಿದ್ದಾರೆ.




ಗ್ರಾಮಗಳ ಅಭಿವೃದ್ಧಿಗೆ ಉದ್ಯೋಗ ಖಾತ್ರಿ ಯೋಜನೆ ವರದಾನವಾಗಿದೆ. ಅದರಲ್ಲೂ ಶಾಲಾಭಿವೃದ್ಧಿಗೆ ಆದ್ಯತೆಯ ಮೇಲೆ ಕ್ರಮಕೈಗೊಳ್ಳಲಾಗಿದೆ. ಗ್ರಾ.ಪಂ ಆಡಳಿತ ಮಂಡಳಿಯವರು ಈ ಬಗ್ಗೆ ಮುತುವರ್ಜಿ ವಹಿಸಬೇಕು.

**– ಕೃಷ್ಣಪ್ಪ ಧರ್ಮರ.**
ಕಾರ್ಯನಿರ್ವಾಹಕ ಅಧಿಕಾರಿಗಳು(ಪ್ರಭಾರ)
–ತಾ.ಪಂ, ಲಕ್ಷ್ಮೇಶ್ವರ.

## ಸಾಕ್ಷಿ ಸುಭಾಷಿತ

ದೇವರ ನುಡಿಯನ್ನು ನಿಮ್ಮ ಕಿವಿಯಿಂದಲ್ಲ
ಹೃದಯದಿಂದ ಕೇಳಿಸಿಕೊಳ್ಳಿ

–ಸುಭಾಷಿತ

## ಸಂಪಾದಕೀಯ

### ಅನುದಾನಕ್ಕೆ ದಕ್ಷಿಣದ ರಾಜ್ಯಗಳು ಪ್ರತಿಭಟನೆ ಮಾರ್ಗ ಅನುಸರಿಸಲಿ

ವಿತ್ತ ಮಂತ್ರಿ ನಿರ್ಮಲಾ ಸೀತಾರಾಮನ್ ಅವರು ಮಧ್ಯಂತರ ಬಜೆಟ್ ಮಂಡನೆ ನಂತರ, ಸಂಸದ ಡಿ.ಕೆ. ಸುರೇಶ ವ್ಯಕ್ತಪಡಿಸಿದ ಅಭಿಪ್ರಾಯ ಲೋಕಸಭೆಯಲ್ಲಿ ಕೋಲಾಹಲ ಸೃಷ್ಟಿಸಿದೆ.

ಆಡಳಿತ ಪಕ್ಷ ಬಿಜೆಪಿ ಸಂಸದರು ಬೇಷರತ್ ಕ್ಷಮೆಯಾಚನೆಗೆ ಒತ್ತಾಯಿಸಿದ್ದಾರೆ. ಆದರೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸಹ, ದೇಶ ವಿಭಜನೆಯ ಅಭಿಪ್ರಾಯವನ್ನು ನಾವು ಸಹಿಸುವುದಿಲ್ಲ. ಒಂದು ವೇಳೆ ಡಿ.ಕೆ. ಸುರೇಶ ಆ ರೀತಿ ಹೇಳಿಕೆ ನೀಡಿದ್ದರೆ ಹಕ್ಕು ಬಾದ್ಯತಾ ಸಮಿತಿ ನೇಮಿಸಲಿ ಎನ್ನುವ ಮಾತುಗಳನ್ನಾಡಿದ್ದಾರೆ.

ಅನುದಾನ ಹಂಚಿಕೆ, ಕಾರ್ಯಕ್ರಮಗಳ ಘೋಷಣೆಯಲ್ಲಿ ದಕ್ಷಿಣ ಭಾರತದ ರಾಜ್ಯಗಳಿಗೆ ಅನ್ಯಾಯವಾಗಿರುವುದು ಒಪ್ಪಿಕೊಳ್ಳುವ ವಿಷಯ. ಆದರೆ ಡಿ.ಕೆ. ಸುರೇಶ ಪ್ರತ್ಯೇಕ ದೇಶದ ಮಾತು ಒಪ್ಪಲು ಸಾಧ್ಯವಿಲ್ಲ. ಅಖಂಡ ಭಾರತದ ಸಂಕಲ್ಪ ಕಂಡಿದ್ದ ಕಾಂಗ್ರೆಸ್ ಪಕ್ಷದ ಸಂಸದರೆ ಈ ರೀತಿ ಹೇಳಿಕೆ ನೀಡುವುದು ಸರಿಯಲ್ಲ.

ಬಜೆಟ್‌ನಲ್ಲಿ ದಕ್ಷಿಣದ ರಾಜ್ಯಗಳಿಗೆ ಅನುದಾನ ಹಂಚಿಕೆಯಲ್ಲಿ ತಾರತಮ್ಯ ಆಗಿದೆ. ಅದನ್ನು ಸರಿಪಡಿಸುವಂತೆ ಬಜೆಟ್ ಮೇಲಿನ ಚರ್ಚೆಯಲ್ಲಿ ವಿಷಯ ಪ್ರಸ್ತಾಪಿಸಬಹುದು. ಇಲ್ಲವೇ ದಕ್ಷಿಣದ ರಾಜ್ಯಗಳ ಮುಖ್ಯಮಂತ್ರಿಗಳ ಜೊತೆ ದೆಹಲಿಯಲ್ಲಿ ಪ್ರತಿಭಟನೆ ನಡೆಸಬೇಕಾಗುತ್ತದೆ ಎನ್ನುವ ಎಚ್ಚರಿಕೆ ನೀಡಬಹುದಿತ್ತು. ಆದರೆ ಡಿ.ಕೆ. ಸುರೇಶ, ದೇಶದ ವಿಭಜನೆಯ ಮಾತು ಆಡಿರುವುದು ಚರ್ಚೆಗೆ ಕಾರಣವಾಗಿದೆ.

ಪ್ರತ್ಯೇಕ ದೇಶ ಸಮಸ್ಯೆಗೆ ಪರಿಹಾರ ಅಲ್ಲ. ಪ್ರತ್ಯೇಕ ದೇಶದ ಕೂಗು ಸಹ ಪ್ರಸ್ತುತ ಅಲ್ಲ. ಆದರೆ ಅನುದಾನಕ್ಕೆ, ಆಗಿರುವ ತಾರತಮ್ಯ ನಿವಾರಣೆಗೆ ಕೇಂದ್ರದ ಮೊರೆ ಹೋಗುವುದರಲ್ಲಿ ತಪ್ಪಿಲ್ಲ. ನಮ್ಮ ಪ್ರತಿನಿಧಿಗಳ ಮೂಲಕ ಕೇಂದ್ರ ಸರಕಾರದ ಮೇಲೆ ಒತ್ತಡ ತರಲು ಸಾಕಷ್ಟು ಅವಕಾಶಗಳಿವೆ. ಅವುಗಳೆಲ್ಲವನ್ನು ಬಳಕೆ ಮಾಡಿಕೊಳ್ಳಲು ಕಾಲ ಪಕ್ವವಾಗಿದೆ. ಕೇವಲ ಕಾಂಗ್ರೆಸ್ ಮಾತ್ರವಲ್ಲದೇ, ದಕ್ಷಿಣ ಭಾರತದ ರಾಜ್ಯಗಳ ಸಂಸದರು ಅನುದಾನಕ್ಕಾಗಿ ಕೇಂದ್ರದ ಮೇಲೆ ಒತ್ತಡ ಹಾಕುವ ಕೆಲಸಕ್ಕೆ ಕೈ ಹಾಕಲಿ.

---

ಬಾನಾಡಿಗಳ ಮೆಚ್ಚಿನ ವಲಸೆ ತಾಣಕ್ಕೀಗ ಮತ್ತೊಂದು ಗರಿ

# ಮಾಗಡಿ ಕೆರೆಗೆ 'ರಾಮ್ಸಾರ್' ಗೌರವ

ಜೌಗು ಪ್ರದೇಶಗಳು ನಮ್ಮ ಪರಿಸರ ವ್ಯವಸ್ಥೆಯ ಸುಂದರ ಭಾಗವಾಗಿದೆ ಮತ್ತು ನಾವು ತೇವ ಪ್ರದೇಶಗಳ ಬಗ್ಗೆ ಕಾಳಜಿ ವಹಿಸಬೇಕು ಎಂಬುದು ವಿಶ್ವ ಸಂಸ್ಥೆಯ ಅಭಿಪ್ರಾಯವಾಗಿದೆ. ಫೆಬ್ರುವರಿ 2ರಂದು 'ವಿಶ್ವ ಜೌಗುಪ್ರದೇಶ ದಿನಾಚರಣೆ' ಹಿಂದಿನ ದಿನ ದೇಶದ 5 ತಾಣಗಳು ರಾಮ್ಸಾರ್ ಜೌಗು ಪ್ರದೇಶಗಳ ಪಟ್ಟಿಯಲ್ಲಿ ಸ್ಥಾನ ಪಡೆದುಕೊಂಡಿದ್ದು, ವಿಶೇಷವೆಂದರೆ ಇದರಲ್ಲಿ ಕರ್ನಾಟಕದ ಮೂರು ಪಕ್ಷಿ ಸಂರಕ್ಷಿತ ಪ್ರದೇಶಗಳು ಹಾಗೂ ಇನ್ನೆರಡು ತಮಿಳುನಾಡಿನಲ್ಲಿವೆ. ಇವು ಜಾಗತಿಕ ರಾಮ್ಸಾರ್ ಮಾನ್ಯತೆ ಪಡೆದಿರುವುದು ಹೆಮ್ಮೆಯ ಸಂಗತಿಯಾಗಿದೆ. ನಮ್ಮ ದೇಶದಲ್ಲಿ 75 ತಾಣಗಳು ರಾಮ್ಸಾರ್ ಜೌಗು ಪ್ರದೇಶಗಳ ಪಟ್ಟಿಯಲ್ಲಿದ್ದವು. ಸದ್ಯ ಆ ಸಂಖ್ಯೆ 80ಕ್ಕೆ ಏರಿಕೆಯಾಗಿದೆ.



ಯುನೆಸ್ಕೋ 'ರಾಮ್ಸಾರ್ ವೆಟ್ಲ್ಯಾಂಡ್' ಪಟ್ಟಿಗೆ ರಾಜ್ಯದ ಮಾಗಡಿ ಕೆರೆ ಸ್ಥಾನ ಪಡೆದುಕೊಂಡಿದೆ. ಇದಕ್ಕಿಂತ ಮೊದಲು ರಾಮ್ಸಾರ್ ಅಂದರೆ ಏನು ಎಂದು ತಿಳಿಯೋಣ. ಈ ಮುಂಚೆ ಪರ್ಷಿಯ ಎಂದು ಕರೆಯಲ್ಪಡುತ್ತಿದ್ದ ಪಶ್ಚಿಮ ಏಷ್ಯಾದ ಇರಾನ್ ದೇಶದಲ್ಲಿನ ರಾಮ್ಸರ್ ಎನ್ನುವುದು ಒಂದು ನಗರ. 1971ರಲ್ಲಿ ಜಗತ್ತಿನ ಚೌಗು ಪ್ರದೇಶಗಳ ಸಂರಕ್ಷಣೆಗಾಗಿ ಯುನೆಸ್ಕೋ ಮೊಟ್ಟ ಮೊದಲ ಬಾರಿಗೆ ರಾಮ್ಸರ್ ಎಂಬಲ್ಲಿ ಸಮಾವೇಶ ಆಯೋಜಿಸಿತ್ತು. ಮುಂದೆ ಜಗತ್ತಿನಾದ್ಯಂತ ಅದು ರಾಮ್ಸಾರ್ ಸಮಾವೇಶವಾಗಿ ನಡೆಯುತ್ತಿದೆ. ರಾಮ್ಸಾರ್ ಚೌಗು ಪ್ರದೇಶ ಎಂದು ಗುರುತಿಸಲಾದ ಪ್ರದೇಶಕ್ಕೆ ಕೇಂದ್ರ ಮತ್ತು ರಾಜ್ಯ ಸರಕಾರದ ಅನುದಾನ ಸಿಗಲಿದ್ದು, ಚೌಗು ಪ್ರದೇಶಗಳ ಅಭಿವೃದ್ಧಿಗೆ



ಈ ಕೆರೆ ಎರೆ ಅಥವಾ ಕಪ್ಪು ಮಣ್ಣಿನಿಂದ ಕೂಡಿದ್ದು, ಇಲ್ಲಿ ಮೀನು, ಉಭಯಚರ, ಮೃದ್ವಂಗಿಗಳು ಹಾಗೂ ಹಾವುಗಳು ವಿಪುಲವಾಗಿರುವುದರಿಂದ ತಿನ್ನಲು ಅನುಕೂಲಕರವಾದ ಸ್ಥಳವಾಗಿದೆ. ಸುತ್ತಲಿನ ಪ್ರದೇಶದಲ್ಲಿ 20–25ಮೈಲಿ ದೂರದವರೆಗೆ ವಲಸೆ ಹಕ್ಕಿಗಳು ಚಲಿಸುತ್ತಾ, ಅವು ಆಹಾರ ಅರಸಿ ನಿತ್ಯ ರಾಮಗೇರಿ, ಪಶುಪತಿಹಾಳ, ಸಂಶಿ, ಹಿರೆಗುಂಜಳ, ಯಳವತ್ತಿ, ಯತ್ನಳ್ಳಿ, ಗೊಜನೂರ, ಬಸಾಪುರ ಮತ್ತಿತರ ಗ್ರಾಮಗಳ ವ್ಯಾಪ್ತಿಯಲ್ಲಿ ಸಂಚರಿಸಿ ಶೇಂಗಾ, ಹಸಿ ಕಡ್ಲಿ ಕಾಳು ಹಾಗೂ ಕಡ್ಲಿ ಗಿಡಗಳಲ್ಲಿರುವ ಕೀಟಗಳನ್ನು ತಿನ್ನುತ್ತವೆ. ಹಸಿವು ನೀಗಿಸಿಕೊಂಡು ಮತ್ತೆ ಮಾಗಡಿ ಕೆರೆಯಲ್ಲಿಗೆ ಬಂದು ವಾಸ್ತವ್ಯ ಹೂಡುತ್ತವೆ.

ಹೆಚ್ಚಿನ ಆದ್ಯತೆ ದೊರೆಯಲಿದೆ.

ಇದು ತೇವ ಭೂಮಿಗಳ ಸಂರಕ್ಷಣೆ ಮತ್ತು ಅವುಗಳ ಸಂಪನ್ಮೂಲಗಳ ಸಮರ್ಥನೀಯ ಬಳಕೆಗೆ ಸಂಬಂಧಿಸಿದಂತೆ ರಾಷ್ಟ್ರೀಯ ಕ್ರಮ ಮತ್ತು ಸಹಕಾರವನ್ನು ಒದಗಿಸುತ್ತದೆ. ವಿಶೇಷವಾಗಿ, ಜಲಪಕ್ಷಿಗಳ ಆವಾಸಸ್ಥಾನವನ್ನು ಸಂರಕ್ಷಿಸಲು ಸಹಾಯ ಮಾಡುವ ಉದ್ದೇಶದಿಂದ ಇದನ್ನು ಸ್ಥಾಪಿಸಲಾಯಿತು. ನವೆಂಬರ್ 2023ರ ಹೊತ್ತಿಗೆ, ಪ್ರಪಂಚದಾದ್ಯಂತ 2,500 ರಾಮ್ಸರ್ ಸ್ಥಳಗಳಿವೆ. ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನಲ್ಲಿರುವ ಮಾಗಡಿ ಗ್ರಾಮದ ಈ ಕೆರೆಯ ಒಟ್ಟು ವಿಸ್ತೀರ್ಣ 134.15 ಎಕರೆಯಷ್ಟು. ಚಳಿಗಾಲ ಆರಂಭವಾದರೆ ಸಾಕು, ಸಾವಿರಾರು ಕಿಲೋಮೀಟರ್ ದೂರದಿಂದ ಹಿಮಾಲಯ ಮತ್ತು ಸಾಗರ–ಸಮುದ್ರ ದಾಟಿ ವಿದೇಶಿ ಹಕ್ಕಿಗಳು ಮಾಗಡಿ ಕೆರೆಗೆ ನವೆಂಬರ್ ತಿಂಗಳಾಂತ್ಯಕ್ಕೆ ಬಾನಾಡಿಗಳು ಆಗಮಿಸುತ್ತವೆ.

ನವೆಂಬರ್ ತಿಂಗಳಾಂತ್ಯಕ್ಕೆ ಇಲ್ಲಿಗೆ 130ಕ್ಕೂ ಹೆಚ್ಚು ಜಾತಿಯ ಹಕ್ಕಿಗಳು ವಿವಿಧ ದೇಶಗಳಿಂದ ವಲಸೆ ಬರುವದಾಗಿ ಪಕ್ಷಿ ತಜ್ಞರು ಗುರುತಿಸಿದ್ದಾರೆ. ಪ್ರತಿವರ್ಷವೂ ಚಳಿಗಾಲದ ವೇಳೆ ಕಳೆದ 8–9 ವರ್ಷಗಳಿಂದ ಮಂಗೋಲಿಯ, ಪಾಕಿಸ್ತಾನ, ಬಾಂಗ್ಲಾದೇಶ, ನೇಪಾಳ, ಸೈಬೇರಿಯಾ, ಮಲೇಷಿಯಾ, ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್, ಲಡಾಖ್, ಟಿಬೆಟ್, ಸೈಬಿರಿಯ ಸಹಿತ ಹತ್ತಾರು ದೇಶಗಳಿಂದ ಸಹಸ್ರಾರು ಪಕ್ಷಿಗಳು ಬರುತ್ತಿವೆ ಎಂದು ಹೇಳಲಾಗುತ್ತಿದೆ. ಇವುಗಳ ಕಲರವ ಪ್ರತಿವರ್ಷ ಕೆರೆಗೆ ರಂಗು ತರುತ್ತಿದೆ.



ಒಟ್ಟಾರೆಯಾಗಿ, ಜಲಭೂಮಿಗಳು ಭೂಮಿ ಮತ್ತು ನೀರಿನ ನಡುವಿನ ಕೊಂಡಿ. ಸೌಂದರ್ಯದ ಸ್ಥಳ ಮತ್ತು ಜೀವನದ ಭೂಮಿಯು ಶ್ವಾಸಕೋಶಗಳಾಗಿವೆ. ಶುದ್ಧ ಗಾಳಿಯನ್ನು ಉತ್ಪಾದಿಸುತ್ತವೆ ಮತ್ತು ಅಸಂಖ್ಯಾತ ಜಾತಿಗಳಿಗೆ ನೆಲೆಯನ್ನು ಒದಗಿಸುತ್ತವೆ. ಈ ಪ್ರಮುಖ ಆವಾಸಸ್ಥಾನಗಳನ್ನು ಮತ್ತು ಅವು ಬೆಂಬಲಿಸುವ ಲೆಕ್ಕವಿಲ್ಲದಷ್ಟು ಜಾತಿಗಳನ್ನು ರಕ್ಷಿಸಲು ನಾವು ಒಟ್ಟಾಗಿ ಕಾರ್ಯ ಮಾಡೋಣ.



– ಬಸವರಾಜ ಎಮ್.ಯರಗುಪ್ಪಿ.
ಬಿಆರ್‌ಪಿ, ಶಿರಹಟ್ಟಿ–ಲಕ್ಷ್ಮೇಶ್ವರ.

---


ಚಂದ್ರಕಲಾ ಎಂ.ಇಟಗಿಮಠರ 2ನೇ ಕವನ ಸಂಕಲನ ಲೋಕಾರ್ಪಣೆ

# 'ಇವರ್ನ ನಂಬುದರ ಹೆಂಗಂತಿನಿ?'

ನಮ್ಮ ಸಂಸ್ಕೃತಿ–ಸಂಸ್ಕಾರ ನಮ್ಮ ಜೀವನದಲ್ಲಿ ಬಹಳ ಮಹತ್ವದ ಪಾತ್ರವನ್ನು ವಹಿಸುತ್ತದೆ. ಸಾಧು ಸಜ್ಜನರು ಸಮಾಜದ ಒಳತಿಗಾಗಿ ಶ್ರಮಿಸುತ್ತಾರೆ. 12ನೇ ಶತಮಾನದಲ್ಲಿ ಬಸವಾದಿ ಶರಣರು ತಮ್ಮ ವಚನಗಳಿಂದ ಸಮಾಜದ ಅಂಕು–ಡೊಂಕುಗಳನ್ನು ತಿದ್ದುತ್ತಾ ಸಮಾಜದಲ್ಲಿ ಶ್ರೇಷ್ಠ ವ್ಯಕ್ತಿಗಳಾಗಿ ಬಾಳಿದರು. ಶತಮಾನಗಳೇ ಗತಿಸಿದರೂ ಅವರು ಬರೆದಿಟ್ಟ ಸಾಹಿತ್ಯ ಅಜರಾಮರವಾಗಿ ಉಳಿದಿವೆ.

ಹೀಗೆ ಸಾಹಿತ್ಯವೆಂಬುದು ಮುಂದಿನ ಪೀಳಿಗೆಗೆ ದಾರಿ ದೀಪವಾಗುತ್ತವೆ. ಮಹಾನ್ ಸಾಹಿತಿಗಳು ಹಲವಾರು ಪ್ರಕಾರದ ಸಾಹಿತ್ಯದಲ್ಲಿ ಕೃಷಿ ಮಾಡಿ ಕನ್ನಡ ಸಾಹಿತ್ಯವನ್ನು ಉತ್ತುಂಗಕ್ಕೆ ಏರಿಸಿದ್ದಾರೆ. ಈಗಲೂ ಸಹ ಯುವ ಸಾಹಿತಿಗಳು ಹಿರಿಯ ಸಾಹಿತಿಗಳ ಮಾರ್ಗದಲ್ಲಿ ತಮ್ಮದೇ ಆದ ಸಾಹಿತ್ಯ ಸೇವೆ ಮಾಡುತ್ತಾ ಸಮಾಜದ ಅಂಧಕಾರವನ್ನು ತೊಡೆದಾಕುವಲ್ಲಿ ಪ್ರಯತ್ನ ನಡೆಸಿದ್ದಾರೆ.

ಅಂತಹ ಯುವ ಸಾಹಿತಿಗಳಲ್ಲಿ ಒಬ್ಬರಾದ ಸಹೋದರಿ ಚಂದ್ರಕಲಾ ಎಂ.ಇಟಗಿಮಠ ಸಾಹಿತ್ಯ ಸೇವೆಗಾಗೆ ಕಪ್ಪತ್ತಗಿರಿ ಸಾಹಿತ್ಯ ವೇದಿಕೆಯನ್ನು ಕಟ್ಟಿಕೊಂಡು, ಸಾಹಿತ್ಯ ಸೇವೆ ಮಾಡುತ್ತಾ ಕಥೆ, ಕವನಗಳನ್ನು ಬರೆಸುತ್ತಾ ಮುನ್ನಡೆಯುತಿದ್ದಾರೆ. ಇವರು ಸಹ ಈಗಾಗಲೇ 'ಚಂದ್ರ ಲಹರಿ' ಎಂಬ




ಪ್ರಥಮ ಕವನ ಸಂಕಲನ ಹೊರ ತಂದಿದ್ದಾರೆ. ಫೆ.4ರಂದು ನಡೆಯುವ ಹೆಣ್ಣು ಜಗದ ಕಣ್ಣು ಸಾಹಿತ್ಯ ವೇದಿಕೆ ರಾಜ್ಯ ಘಟಕ ರಾಯಚೂರಿನವರ ಎರಡನೇ ಸಾಹಿತ್ಯ ವಾರ್ಷಿಕೋತ್ಸವದಲ್ಲಿ ಚಂದ್ರಕಲಾ ಎಂ.ಇಟಗಿಮಠರವರ ದ್ವಿತೀಯ ಕವನ ಸಂಕಲನ 'ಇವರ್ನ ನಂಬುದರ ಹೆಂಗಂತಿನಿ?' ಹೊರ ತರುತ್ತಿರುವುದು ಸಂತಸದ ವಿಷಯ.

ಈ ಕವನ ಸಂಕಲನದಲ್ಲಿ 60 ಕವನಗಳನ್ನು ಕಾಣಬಹುದು. ಪ್ರತಿಯೊಂದು ಕವನವೂ ತನ್ನದೇ ಆದ ವಿಶಿಷ್ಟತೆಯನ್ನು ಹೊಂದಿವೆ. ಸಸ್ಯ ಕಾಶಿ ಎಂಬ ಶೀರ್ಷಿಕೆಯ ಮೂಲಕ ಕಪ್ಪತ ಗುಡ್ಡ ವರ್ಣನೆಯನ್ನು ಚೆನ್ನಾಗಿ ಮೂಡಿಸಿದ್ದಾರೆ.

'ನಮ್ಮನ್ನು ಕಣ್ಣಿಲಿ ಕಣ್ಣಿಟ್ಟು ಕಾದವಳು ಅವ್ವಾ' ಕವನದಲ್ಲಿ ಅವ್ವನ ಬಗ್ಗೆ ಮನಮುಟ್ಟುವಂತೆ ಮನಸ್ಸಿನ ಅಂತರಾಳದ ಭಾವನೆಗಳನ್ನು ಹೊರಹಾಕಿದ್ದಾರೆ. ತಾಯಿ ತನಗೆ ಎಷ್ಟೇ ನೋವು, ಕಷ್ಟ ಬಂದರೂ ಅದನ್ನು ಲೆಕ್ಕಿಸದೆ ತನ್ನ ಮಕ್ಕಳಿಗಾಗಿ ಜೀವನ ಸವೆಸುತ್ತಾಳೆ ಎಂಬ ಕವಿತ ಬಹಳ ಮನಮುಟ್ಟುವಂತೆ ರಚಿಸಿದ್ದಾರೆ.

ಬಾಳಿನಲ್ಲಿ ಏನೇ ಕಷ್ಟ ಬಂದರೂ ಅದನ್ನು ಇನ್ನೊಬ್ಬರಿಗೆ ತೋರ್ಪಡಿಸದೆ ನಮ್ಮಲ್ಲಿ ಅಡಗಿಸಿಕೊಂಡು, ನಮ್ಮವರಿಗಾಗಿ ನಾವು ಬದು–ಕೋಣ ಎನ್ನುವ ಸಂದೇಶ ನೀಡುವ ಕವಿತೆಯಿದೆ. ನಮ್ಮ ಜೀವನಕ್ಕೆ ಬೇಕಾಗುವ ಅಮೂಲ್ಯ ಕವಿತೆಗಳು ಈ ಕವನ ಸಂಕಲನದಲ್ಲಿ ಅಡಗಿವೆ. ಸಮಾಜದಲ್ಲಿ ಮೋಸ, ಅನ್ಯಾಯ, ಅಸೂಯೆಯ ಭಾವನೆ ತುಂಬಿ ತುಳುಕುತ್ತಿದೆ ಎಂಬ ಸಂದೇಶವನ್ನು ಸಾರುವ ಕವಿತೆಗಳೂ ಇವೆ. ನಮ್ಮ ಮುಂದೆ ಚೆನ್ನಾಗಿ ನಗುತ್ತಾ ಮಾತಾಡುತ್ತಾರೆ, ಹಿಂದೆ ನಮ್ಮನ್ನೇ ತೆಗಳುವ ಜನರಿದ್ದಾರೆ. ಅಂತವರ ನಡುವೆ ಎಚ್ಚರಿಕೆಯಿಂದ ಬಾಳ್ವೆ ಮಾಡಬೇಕು ಎಂಬ ಸಂದೇಶ ಸಾರುವ ಕವನಗಳನ್ನು ಕಾಣಬಹುದು.

ಒಟ್ಟಿನಲ್ಲಿ ಈ ಕವನ ಸಂಕಲನ ಒಬ್ಬ ಮನುಷ್ಯ ಹೇಗೆ ಬಾಳಿದರೆ ಸಮಾಜದಲ್ಲಿ ಬೆಲೆ ಹೆಚ್ಚಾಗುವುದು ಎಂಬುದನ್ನು ತಿಳಿಸಿಕೊಡುತ್ತದೆ. ಎಂತವರ ಸಹವಾಸ ಮಾಡಿದರೆ ನಮಗೆ ಒಳಿತಾಗುತ್ತದೆ ಎಂಬ ಸಂದೇಶವನ್ನು ಸಹ ತಿಳಿಸಿ ಕೊಡುತ್ತದೆ. ಅಚಲವಾದ ನಿರ್ಧಾರ ನಮ್ಮಲ್ಲಿರಬೇಕು. ಆತ್ಮವಿಶ್ವಾಸ ಒಂದಿದ್ದರೆ ಏನನ್ನಾದರೂ ಸಾಧಿಸಬಹುದು ಎಂಬುದನ್ನು ತಿಳಿಸುವ ಕವನಗಳನ್ನು ಈ ಕವನ ಸಂಕಲನದಲ್ಲಿ ಮನಗಾಣಬಹುದು. ಒಟ್ಟಿನಲ್ಲಿ ಈ 60 ಕವಿತೆಗಳು ಒಂದಕ್ಕಿಂತ ಒಂದು ಸುಂದರವಾಗಿ ಮೂಡಿ ಬಂದಿವೆ. ಓದುಗರ ಮನಸ್ಸಿಗೆ ಮುದ ನೀಡುವುದಲ್ಲದೆ, ಜೀವನದಲ್ಲಿ ಹೇಗೆ ಬದುಕಬೇಕು ಎಂಬುದನ್ನು ಕಲಿಸಿ ಕೊಡುತ್ತದೆ.



**– ಎಸ್.ಕೆ. ಆಡಿನ.**
**ಹೊಳೆಆಲೂರ.**

---

## ಅಭಿವೃದ್ಧಿ ಪರ ಮುಂಗಡ ಪತ್ರ: ಸುವರ್ಣಾ ಮದರಿಮಠ

■ವಿಜಯಸಾಕ್ಷಿ ಸುದ್ದಿ, ಗದಗ



ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಕೇಂದ್ರ ವಿತ್ತ ಸಚಿವೆ ನಿರ್ಮಾಲಾ ಸೀತಾರಾಮ್ ಮಂಡಿಸಿರುವ ಮುಂಗಡ ಪತ್ರ ಮಹಿಳೆಯರು, ಬಡವರು, ರೈತರು ಮತ್ತು ಯುವಕರ ಸಬಲೀಕರಣ ಹಾಗೂ ಅವರ ಕಲ್ಯಾಣಕ್ಕಾಗಿ ಕಾರ್ಯಕ್ರಮಗಳನ್ನು ರೂಪಿಸಿ ಸಿದ್ಧಪಡಿಸಿದ್ದು, ಇದೊಂದು ಐತಿಹಾಸಿಕ ಮಧ್ಯಂತರ ಮುಂಗಡ ಪತ್ರವಾಗಿದೆ ಎಂದು ಗದಗ ಜಿಲ್ಲಾ ವಾಣಜ್ಯೋದ್ಯಮ ಸಂಸ್ಥೆಯ ಮಹಿಳಾ ಘಟಕದ ಅಧ್ಯಕ್ಷೆ ಸುವರ್ಣಾ ಎಸ್.ಮದರಿಮಠ ಸಂತಸ ವ್ಯಕ್ತಪಡಿಸಿದ್ದಾರೆ.

ದೇಶದ ಸರ್ವಾಂಗೀಣ ಅಭಿವೃದ್ಧಿ ಮತ್ತು ಬೆಳವಣಿಗೆಯನ್ನು ದೃಷ್ಟಿಯಲ್ಲಿಂಟುಕೊಂಡು ಮಂಡಿಸಿದ ಮುಂಗಡ ಪತ್ರ ದೇಶದಲ್ಲಿ ಪ್ರವಾಸೋದ್ಯಮ, ಐತಿಹಾಸಿಕ ಸ್ಥಳಗಳ ಅಭಿವೃದ್ಧಿಗೆ ಉತ್ತೇಜನ ನೀಡಿರುವುದು ಸ್ವಾಗತಾರ್ಹ ಕ್ರಮವೆಂದು ತಿಳಿಸಿರುವುದಾಗಿ ಸಂಸ್ಥೆಯ ಮಹಿಳಾ ಘಟಕದ ಗೌರವ ಕಾರ್ಯದರ್ಶಿ ಜ್ಯೋತಿ ದಾನಪ್ಪಗೌಡ್ರ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಫೆ.5ರಂದು ಉಚಿತ ತಪಾಸಣೆ

■ವಿಜಯಸಾಕ್ಷಿ ಸುದ್ದಿ, ಗದಗ

ವಿಶ್ವ ಕ್ಯಾನ್ಸರ್ ದಿನಾಚರಣೆ ನಿಮಿತ್ತ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಗೂ ಬೋಧಕ ಆಸ್ಪತ್ರೆ ಗದಗ ತಾಲೂಕ ಜಿಲ್ಲಾ ಎನ್.ಸಿ.ಡಿ. ಘಟಕ ಸಹಯೋಗದಲ್ಲಿ ಫೆಬ್ರವರಿ 5 ರಂದು ಕ್ಯಾನ್ಸರ್ ತಪಾಸಣೆಯನ್ನು ಹಮ್ಮಿಕೊಳ್ಳಲಾಗಿದೆ.

ಪ್ರಸಕ್ತ ವರ್ಷ " ಆರೈಕೆಯ ಅಂತರವನ್ನು ಕಡಿತಗೊಳಿಸಿ " ಘೋಷವಾಕ್ಯದಂತೆ ಕಾರ್ಯಕ್ರಮ ಆಯೋಜಿಸಲಾಗುತ್ತದೆ. ರಾಷ್ಟ್ರೀಯ ಅಸಾಂಕ್ರಾಮಿಕ ರೋಗಗಳ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಕಾರ್ಯಕ್ರಮದಡಿ 30 ವರ್ಷ ಮೇಲ್ಪಟ್ಟವರಿಗೆ ಸಾಮಾನ್ಯ ಕ್ಯಾನ್ಸರ್‌ಗಳಾದ ಬಾಯಿ, ಸ್ತನ ಹಾಗೂ ಗರ್ಭಾಶಯ ಕಂಠದ ಕ್ಯಾನ್ಸರ್‌ಗಳ ಉಚಿತ ತಪಾಸಣೆಯನ್ನು ಜಿಲ್ಲಾ ಆಸ್ಪತ್ರೆ ಹಾಗೂ ತಾಲೂಕು ಆಸ್ಪತ್ರೆಗಳಲ್ಲಿ ಹಮ್ಮಿಕೊಳ್ಳಲಾಗುತ್ತಿದೆ. ಸಾರ್ವಜನಿಕರು ಇದರ ಸದುಪಯೋಗಪಡೆದುಕೊಳ್ಳಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯ ದೂರವಾಣಿ ಸಂಖ್ಯೆ 08372–251263 ಸಂಪರ್ಕಿಸಬಹುದಾಗಿದೆ.

## ಫೆ. 6ರಂದು ಎರಡನೇ ಸುತ್ತಿನ ಬಜೆಟ್ ಪೂರ್ವಭಾವಿ ಸಭೆ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ–ಬೆಟಗೇರಿ ನಗರಸಭೆಯ 2024–25ನೇ ಸಾಲಿನ ಎರಡನೇ ಸುತ್ತಿನ ವಾರ್ಷಿಕ ಬಜೆಟ್ ಮಂಡನೆಯ ಪೂರ್ವಭಾವಿ ಸಭೆಯನ್ನು ಫೆಬ್ರವರಿ 6ರಂದು ಬೆಳಿಗ್ಗೆ 11 ಗಂಟೆಗೆ ಸಾರ್ವಜನಿಕರ ಹಾಗೂ ಸಂಘ ಸಂಸ್ಥೆಗಳಿಗೆ ಸಲಹೆ ನೀಡಲು ಸಭೆ ಆಯೋಜಿಸಲಾಗಿದೆ ಎಂದು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಫೆ. 9ರಂದು ನಗರಸಭೆ ಸಾಮಾನ್ಯ ಸಭೆ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ನಗರಸಭೆಯ ಸಭಾಭವನದಲ್ಲಿ ಫೆಬ್ರವರಿ 9 ರಂದು ಬೆಳಿಗ್ಗೆ 11 ಗಂಟೆಗೆ ಸಾಮಾನ್ಯ ಸಭೆ ಹಮ್ಮಿಕೊಳ್ಳಲಾಗಿದೆ ಎಂದು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

---

ಕೆ.ಎಚ್. ಪಾಟೀಲ ಸ.ಪ್ರ.ದ ಕಾಲೇಜು ಆವರಣದಲ್ಲಿ ಜರುಗಲಿರುವ ಇಂದಿನ ಕಾರ್ಯಕ್ರಮ

# ಕರ್ನಾಟಕ ಏಕೀಕರಣ ಚಳುವಳಿ ವಿಚಾರ ಗೋಷ್ಠಿಗಳು

■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ–50 ಹಾಗೂ ಕರ್ನಾಟಕ ನಾಮಕರಣ 50ರ ಮಹೋತ್ಸವ, ಕೆ.ಎಚ್. ಪಾಟೀಲ ಸರಕಾರಿ ಪ್ರಥಮ ದರ್ಜೆ ಕಾಲೇಜು ಹುಲಕೋಟಿ ಗದಗ ಇವರ ಸಹಯೋಗದಲ್ಲಿ ಕರ್ನಾಟಕ ಏಕೀಕರಣ ಚಳುವಳಿ ವಿಚಾರ ಸಂಕಿರಣ ಹಾಗೂ ಐತಿಹಾಸಿಕ ದಾಖಲೆಗಳ ಮತ್ತು ಛಾಯಾಚಿತ್ರಗಳ ಪ್ರದರ್ಶನದ ಸಮಾರಂಭದ ನಿಮಿತ್ತ ಫೆಬ್ರುವರಿ 4ರಂದು ಹುಲಕೋಟಿಯ ಕೆ.ಎಚ್. ಪಾಟೀಲ ಸ.ಪ್ರ.ದ ಕಾಲೇಜು ಆವರಣದಲ್ಲಿ ಜರುಗಲಿರುವ ಕಾರ್ಯಕ್ರಮಗಳು ಹೀಗಿವೆ.

ಫೆ.4ರ ಬೆಳಿಗ್ಗೆ 10.30ಕ್ಕೆ ಕೆ.ಎಚ್.ಪಾಟೀಲ ವೇದಿಕೆಯಲ್ಲಿ ವಿಚಾರಗೋಷ್ಠಿ–3 ಜರುಗಲಿದ್ದು, ಕನಾಟಕ ರಾಜ್ಯ ಶಾಸನ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಡಾ.ಹನುಮಾಕ್ಷಿ ಗೋಗಿ ಅಧ್ಯಕ್ಷತೆ ವಹಿಸಲಿದ್ದಾರೆ.

ಸಂಪನ್ಮೂಲ ವ್ಯಕ್ತಿಗಳಾಗಿ ಧಾರವಾಡ ಹಿರೇಮಲ್ಲೂರನ್ ಪ.ಪೂ ಕಾಲೇಜಿನ ಪ್ರಾಚಾರ್ಯ ಪ್ರೊ.ಶಶಿಧರ ತೋಡಕರ 'ಏಕೀಕರಣ ಪೂರ್ವದ ಕರ್ನಾಟಕ ಇತಿಹಾಸ' ವಿಷಯದ ಕುರಿತು, ಹುಲಕೋಟಿ ಕೆ.ಎಚ್.ಪಾಟೀಲ ಸ.ಪ್ರ.ದ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಡಾ.ಸುಧಾ ಎಸ್.ಕೌಜಗೇರಿ 'ಕರ್ನಾಟಕ ಏಕೀಕರಣದ ಉಗಮ ಮತ್ತು ವಿಕಾಸ ಕುರಿತು, ಹುನಗುಂದ ಎಸ್.ಆರ್. ವಸ್ತ್ರದ ಕಲಾ–ವಾಣಿಜ್ಯ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡಾ. ಎಸ್. ಆರ್. ನಾಗಣ್ಣವರ 'ಕರ್ನಾಟಕ ಏಕೀಕರಣದಲ್ಲಿ ಕಿತ್ತೂರು ಕರ್ನಾಟಕದ ಸಂಘ–ಸಂಸ್ಥೆಗಳ ಪಾತ್ರ' ಕುರಿತು, ಬೆಳಗಾವಿ ಸ.ಪ್ರ.ದ ಕಾಲೇಜಿನ ಉಪನ್ಯಾಸಕರಾದ ಡಾ.ಶೈಲಜಾ ಕರಡಿ 'ಕರ್ನಾಟಕ ಏಕೀಕರಣದಲ್ಲಿ ಭಾಗವಹಿಸಿದ ಕಿತ್ತೂರು ಕರ್ನಾಟಕದ ಮಹನೀಯರು' ಕುರಿತು ವಿಚಾರ ಗೋಷ್ಠಿ ನಡೆಸಲಿದ್ದಾರೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕ ವಸಂತ ಮಡ್ಲೂರ ಗೌರವ ಉಪಸ್ಥಿತಿ ವಹಿಸಲಿದ್ದಾರೆ.

ಬೆಳಿಗ್ಗೆ 10.30ಕ್ಕೆ ಆಲೂರು ವೆಂಕಟರಾವ್ ವೇದಿಕೆಯಲ್ಲಿ ವಿಚಾರಗೋಷ್ಠಿ–4 ಜರುಗಲಿದೆ. ಸ.ಪ್ರ.ದ ಕಾಲೇಜಿನ ಪ್ರಾಂಶುಪಾಲರಾದ ಡಾ. ಎಸ್.ಎಫ್. ಸಿದ್ನೇಕೊಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ.

ಉತ್ತರ ಕನ್ನಡದ ಸ.ಪ್ರ.ದ ಕಾಲೇಜಿನ ಪ್ರಾಧ್ಯಾಪಕ ಡಾ.ಬಸವರಾಜ ಅಕ್ಕಿ 'ಭಾಷಾವಾರು ಪ್ರಾಂತ್ಯಗಳ ಕಲ್ಪನೆ ಮತ್ತು ಅವಲೋಕನ', ಹಾವೇರಿ ಎಂ.ಎ.ಎಸ್.ಸಿ. ಮಹಾವಿದ್ಯಾಲಯದ ಹಂಸಭಾವಿ ಇತಿಹಾಸ ಪ್ರಾಧ್ಯಾಪಕ ಡಾ. ಮಹಾಂತೇಶ ಎಂ.ಅಕ್ಕಿ 'ಕರ್ನಾಟಕ ಏಕೀಕರಣ ಚಳುವಳಿ ಆರಂಭ', ಬೆಳಗಾವಿ ಸ.ಪ್ರ.ದ ಕಾಲೇಜಿನ ಪ್ರಾಧ್ಯಾಪಕ ಡಾ.ಅಪ್ಪಣ್ಣ ವಗ್ಗರ 'ಬಾಂಬೆ ಅಸೆಂಬ್ಲಿಯಲ್ಲಿ ಚರ್ಚಿತ ಮುಂಬೈ ಕರ್ನಾಟಕಕ್ಕೆ ಸಂಬಂಧಿಸಿದ ವಿಷಯಗಳ ಕುರಿತು, ಹುಲಕೋಟಿ ಗ.ಸ.ಜ.ಗಿ. ಪ.ಪೂ ಕಾಲೇಜಿನ ಕನ್ನಡ ಉಪನ್ಯಾಸಕ ಡಾ.ಅರ್ಜುನ ಗೊಳಸಂಗಿಯವರು 'ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಗದಗ ಜಿಲ್ಲೆಯ ಪಾತ್ರ' ಕುರಿತು ವಿಚಾರ ಗೋಷ್ಠಿ ನಡೆಸಲಿದ್ದಾರೆ.

2.30ಕ್ಕೆ ಕೆ.ಎಚ್. ಪಾಟೀಲ ವೇದಿಕೆಯಲ್ಲಿ ವಿಚಾರ ಗೋಷ್ಠಿ–5 ಜರುಗಲಿದ್ದು, ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಚನ್ನಬಸಪ್ಪ ಕಂಠಿ ಅಧ್ಯಕ್ಷತೆ ವಹಿಸುವರು.

ಸಂಪನ್ಮೂಲ ವ್ಯಕ್ತಿಗಳಾಗಿ ಕಸಾಪ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ 'ಏಕೀಕರಣಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಕೊಡುಗೆ' ಕುರಿತು, ಜೆ.ಎಸ್.ಎಸ್. ಶ್ರೀ ಮಂಜುನಾಥೇಶ್ವರ ಸ್ನಾತಕ/ಸ್ನಾತಕೋತ್ತರ ಅಧ್ಯಯನ ಸಂಸ್ಥೆಯ ಇತಿಹಾಸ ಪ್ರಾಧ್ಯಾಪಕರಾದ ಡಾ.ಆರ್.ವಿ. ಚಿಟಗುಪ್ಪಿ 'ಕರ್ನಾಟಕ ಪದದ ಪ್ರಾಚೀನತೆ' ಕುರಿತು, ಮುಂಡರಗಿ ಯುವ ಚಿಂತಕ ರವಿರಾಜ ಕೊಟ್ರಪ್ಪ ದೇಸಾಯಿ 'ಕರ್ನಾಟಕ ಏಕೀಕರಣದ ಪೂರ್ವದ ಇತಿಹಾಸಕ್ಕೆ ದೇಶಗತಿ ಮನೆತನಗಳ ಕೊಡುಗೆಗಳು' ಕುರಿತು, ವಿಶ್ವ ಭಾರತಿ ಪ.ಪೂ ಕಾಲೇಜು ಇತಿಹಾಸ ಉಪನ್ಯಾಸಕರಾದ ತ್ರಿವೇಣಿ ಎಂ.ಚಿಪ್ಪಾಡಿ 'ಕರ್ನಾಟಕ ಏಕೀಕರಣದಲ್ಲಿ ಕನ್ನಡ ಕುಲಪುರೋಹಿತ ಶ್ರೀ ಆಲೂರ ವೆಂಕಟರಾಯರ ಪಾತ್ರ' ಕುರಿತು ವಿಚಾರ ಗೋಷ್ಠಿ ನಡೆಸಲಿದ್ದಾರೆ.

ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯ ಆಡಳಿತಾಧಿಕಾರಿ ಲಕ್ಷ್ಮೀ ಕಾಂತಪ್ಪ ಗೌರವ ಉಪಸ್ಥಿತಿ ವಹಿಸಲಿದ್ದಾರೆ.

ಮಧ್ಯಾಹ್ನ 2.30ಕ್ಕೆ ಆಲೂರ ವೆಂಕಟರಾವ ವೇದಿಕೆಯಲ್ಲಿ ವಿಚಾರಗೋಷ್ಠಿ 6 ಜರುಗಲಿದೆ. ಗದಗ ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಕೆ.ಎಚ್. ಬೇಲೂರ ಅಧ್ಯಕ್ಷತೆ ವಹಿಸಲಿದ್ದಾರೆ.

ಸಂಪನ್ಮೂಲ ವ್ಯಕ್ತಿಗಳಾಗಿ ಮುಂಡರಗಿ ನಿವೃತ್ತ ಕನ್ನಡ ಪ್ರಾಧ್ಯಾಪಕ ಪ್ರೊ.ಆರ್.ಎಲ್. ಪೊಲೀಸ ಪಾಟೀಲ 'ಸ್ವಾತಂತ್ರ್ಯ ಚಳುವಳಿಯಲ್ಲಿ ಗದಗ ಜಿಲ್ಲೆಯ ಪಾತ್ರ' ಕುರಿತು, ಹುಬ್ಬಳ್ಳಿಯ ಸರ್ಕಾರಿ ಸ್ವತಂತ್ರ ಪ.ಪೂ ಕಾಲೇಜಿನ ಪ್ರಾಚಾರ್ಯರಾದ ಎಫ್.ಬಿ. ಸೊರಟೂರ 'ಕರ್ನಾಟಕ ಏಕೀಕರಣದಲ್ಲಿ ಭೌಗೋಳಿಕೆಯ ವ್ಯಾಪ್ತಿ', ರೋಣ ಕೆ.ಎಸ್.ಎಸ್. ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ಉಪನ್ಯಾಸಕರಾದ ಡಾ.ಸುಲೇಮಾನ ಸಾಬ ನದಾಫ್ 'ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಅಂದಾನೆಪ್ಪ ದೊಡ್ಡಮೇಟಿಯವರ ಪಾತ್ರ' ಕುರಿತು, ನಗರದ ವಿದ್ಯಾದಾನ ಪ.ಪೂ ಕಾಲೇಜಿನ ಇತಿಹಾಸ ಉಪನ್ಯಾಸಕ ದತ್ತಪ್ರಸನ್ನ ಪಾಟೀಲ 'ಕರ್ನಾಟಕ ಏಕೀಕರಣಕ್ಕೆ ಹುಯಿಲಗೋಳ ನಾರಾಯಣರಾಯರ ಕೊಡುಗೆ' ಕುರಿತು ವಿಚಾರ ಗೋಷ್ಠಿ ನಡೆಸಲಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ ಬಿ.ಗೌರವ ಉಪಸ್ಥಿತಿ ವಹಿಸುವರು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ವಿಶ್ವ ಕ್ಯಾನ್ಸರ್ ಜಾಗೃತಿ ದಿನಾಚರಣೆ ಹಿನ್ನೆಲೆ: ಫೆ.05 ರಂದು ಜಾಥಾ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಸಮೀಕ್ಷಣಾ ಘಟಕ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಜಿಮ್ಸ್ ಪ್ಯಾರಾ ಮೆಡಿಕಲ್ ಕಾಲೇಜ್, ಸ್ಫೂರ್ತಿ ಪ್ಯಾರಾ ಮೆಡಿಕಲ್ ಕಾಲೇಜ್, ಮುನ್ಸಿಪಲ್ ಕಾಲೇಜ ಗದಗ ಹಾಗೂ ವಿವಿಧ ಸಂಘ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ವಿಶ್ವ ಕ್ಯಾನ್ಸರ್ ಜಾಗೃತಿ ದಿನಾಚರಣೆ ಅಂಗವಾಗಿ ಜಾಗೃತಿ ಜಾಥಾ ಕಾರ್ಯಕ್ರಮವನ್ನು ನಗರದ ಮುನ್ಸಿಪಲ್ ಕಾಲೇಜ್ ಆವರಣದಲ್ಲಿ ಫೆಬ್ರವರಿ 5 ರಂದು ಬೆಳಿಗ್ಗೆ 9 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಕೆ. ಗುರುಪ್ರಸಾದ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಎಸ್. ಎಸ್. ನೀಲಗುಂದ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್. ನೇಮಗೌಡ, ನಗರಸಭೆ ಅಧ್ಯಕ್ಷರಾದ ಉಷಾ ದಾಸರ, ಉಪಾಧ್ಯಕ್ಷರಾದ ಸುನಂದಾ ಬಾಕಳೆ, ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಿರ್ದೇಶಕ ಡಾ.ಬೊಮ್ಮನಹಳ್ಳಿ, ಜಿಮ್ಸ್ ವೈದ್ಯಕೀಯ ಅಧೀಕ್ಷರಾದ ಡಾ.ರೇಖಾ ಎಸ್, ಜಿಲ್ಲಾ ಆಯುಷ್ ಅಧಿಕಾರಿ ಡಾ. ಮಲ್ಲಿಕಾರ್ಜುನ ಉಪ್ಪಿನ, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ಕರಿಗೌಡರ, ಐ.ಎಂ.ಎ. ಅಧ್ಯಕ್ಷ ಡಾ.ಜಿ.ಎಸ್. ಪಲ್ಲೇದ ಆಗಮಿಸುವರು.

ಜಿಲ್ಲಾ ಸಮೀಕ್ಷಣಾ ಘಟಕದ ಜಿಲ್ಲಾ ಸಮೀಕ್ಷಣಾಧಿಕಾರಿ ಡಾ.ವೆಂಕಟೇಶ್ ರಾಠೋಡ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಸ್.ಎಸ್.ನೀಲಗುಂದ ಸ್ವಾಗತ ಕೋರಿದ್ದಾರೆ.

ವಿಶ್ವ ಕ್ಯಾನ್ಸರ್ ಜಾಗೃತಿ ದಿನಾಚರಣೆಯ ಜಾಥಾವು ನಗರದ ಮುನ್ಸಿಪಲ್ ಜೂನಿಯರ್ ಕಾಲೇಜ್ ಅವರಣದಿಂದ ಪ್ರಾರಂಭವಾಗಿ ಗಾಂಧೀಜಿ ವೃತ್ತ, ಮಹೇಂದ್ರಕರ್ ಸರ್ಕಲ್, ಟಾಂಗಾಕೂಟ ಮಾರ್ಗವಾಗಿ ಹಳೆ ಬಸ್ ನಿಲ್ದಾಣ, ರೋಟರಿ ಸರ್ಕಲ್ ಮಾರ್ಗವಾಗಿ ಹಳೆ ಜಿಲ್ಲಾ ಆಸ್ಪತ್ರೆಗೆ ಬಂದು ಮುಕ್ತಾಯಗೊಳ್ಳಲಿದೆ.

### 38ನೇ ರಾಜ್ಯ ಪತ್ರಕರ್ತರ ಸಮ್ಮೇಳನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ

# ಪತ್ರಕರ್ತರಿಗೆ ರಾಜಕೀಯ ಬೇಕಾಗಿಲ್ಲ

■ ವಿಜಯಸಾಕ್ಷಿ ಸುದ್ದಿ, ದಾವಣಗೆರೆ

ಮೌಢ್ಯ, ಕಂದಾಚಾರ, ಕರ್ಮಸಿದ್ಧಾಂತವನ್ನು ಪತ್ರಕರ್ತರು ತಿರಸ್ಕರಿಸಿ ಜನರಿಗೆ ಸತ್ಯ ಹೇಳುವ ಧೈರ್ಯ ಬೆಳೆಸಿಕೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದರು.

ದಾವಣಗೆರೆಯಲ್ಲಿ 38ನೇ ರಾಜ್ಯ ಪತ್ರಕರ್ತರ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪತ್ರಕರ್ತರಿಗೆ ರಾಜಕೀಯ ಬೇಕಾಗಿಲ್ಲ. ವಸ್ತುನಿಷ್ಠವಾಗಿ ಇರಬೇಕು. ನಾಡಿನ ಬಡವರು ಮತ್ತು ಮಧ್ಯಮ ವರ್ಗದವರ ಆರ್ಥಿಕ ಶಕ್ತಿ ಹೆಚ್ಚಿಸುವ ಗ್ಯಾರಂಟಿ ಯೋಜನೆಗಳನ್ನು ಪತ್ರಕರ್ತರು ಬಿಟ್ಟಿ ಗ್ಯಾರಂಟಿ ಎಂದು ಕರೆಯಬಾರದು. ಪಕ್ಷಾತೀತವಾಗಿ, ಜಾತ್ಯತೀತವಾಗಿ, ಧರ್ಮಾತೀತವಾಗಿ ಇರುವ ಈ ಯೋಜನೆಯನ್ನು ಬಿಟ್ಟಿ ಗ್ಯಾರಂಟಿ ಎಂದು ಕರೆಯದೆ, ನೀವೇ ಪರಿಶೀಲಿಸಿ ಬರೆಯಿರಿ. ಏನನ್ನಾದರೂ ಪ್ರಕಟಿಸುವ ಮೊದಲು ಪರಿಶೀಲನೆ ನಡೆಸಿ ಎಂದು ಸಲಹೆ ನೀಡಿದರು.

ಪಟ್ಟಭದ್ರರನ್ನು ಗುರುತಿಸಿ ಮಟ್ಟ ಹಾಕುವ ನಿಷ್ಠುರತೆಯನ್ನು ಪತ್ರಕರ್ತರು ಬೆಳೆಸಿಕೊಳ್ಳಬೇಕು. ಗಂಡ-ಹೆಂಡತಿ ಜಗಳವನ್ನು ಇಡೀ ದಿನ ತೋರಿಸುವುದಕ್ಕಿಂತ, ಸಮಾಜದ ಬೆಳವಣಿಗೆಗೆ ಅಡ್ಡಿ ಆಗಿರುವ ಪಟ್ಟ ಭದ್ರರನ್ನು ಗುರುತಿಸಿ ಬರೆಯಿರಿ. ಇದರಿಂದ ಸಮಾಜಮುಖಿ ಪತ್ರಿಕೋದ್ಯಮ ಸಾಧ್ಯ ಎಂದರು.

ಹಣವಂತರು, ಅತೀ ಶ್ರೀಮಂತರ ಕೈಯಲ್ಲಿ



ಪತ್ರಿಕೋದ್ಯಮ ಸಿಲುಕಿದೆ. ಹೀಗಾಗಿ ಶ್ರೀಮಂತರ ಹಿತಾಸಕ್ತಿ ಕಾಯುವ, ಬಡವರ ಹಿತಾಕ್ತಿಗೆ ವಿರುದ್ಧವಾಗಿ ಬರೆಯುವ ಅಪಾಯ ಇರುತ್ತದೆ. ಇದನ್ನು ಪರಿಶೀಲಿಸಿಕೊಳ್ಳಿ. ನಾನು ಅಭಿವ್ಯಕ್ತಿ ಸ್ವಾತಂತ್ರ್ಯದ ಪರವಾಗಿ ಇರುವವನು, ಬೆಂಬಲಿಸುವವನು. ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಘನತೆ ತರುವಂತೆ ಮಾಡಬೇಕು ಎಂದು ವಿನಂತಿಸಿದರು.

ಸ್ವಾತಂತ್ರ್ಯಾಪೂರ್ವದ ಪತ್ರಿಕೋದ್ಯಮದಲ್ಲಿ ದೇಶಕ್ಕೆ ಸ್ವಾತಂತ್ರ್ಯ ತರಬೇಕು ಎನ್ನುವ ಆಶಯ ಪ್ರಧಾನವಾಗಿ ಕೆಲಸ ಮಾಡಿತ್ತು. ಸ್ವಾತಂತ್ರ್ಯಾನಂತರ ಪ್ರಜಾಪ್ರಭುತ್ವವನ್ನು ಕಾಯುವ, ರಕ್ಷಿಸುವ ಆಶಯ ಪ್ರಮುಖವಾಗಿದೆ. ಜನ ಸಾಮಾನ್ಯರು ಪತ್ರಿಕಾ ವೃತ್ತಿ ಮೇಲೆ ಬಹಳ ನಿರೀಕ್ಷೆ ಇಟ್ಟುಕೊಂಡಿದ್ದಾರೆ. ಆ ನಿರೀಕ್ಷೆಗಳು ಹುಸಿಯಾಗದಂತೆ ಪತ್ರಕರ್ತರು ವೃತ್ತಿಪರತೆ ಬೆಳೆಸಿಕೊಳ್ಳಬೇಕು. ಈಗ ತಂತ್ರಜ್ಞಾನ ಬಹಳ ಬೆಳೆದಿದ್ದು, ಇದರ ಪ್ರಯೋಜನವನ್ನು ಪತ್ರಿಕಾವೃತ್ತಿ ಬಳಸಿಕೊಳ್ಳಬೇಕಿದೆ. ಆದರೆ ಸತ್ಯನಿಷ್ಠೆಯನ್ನು ಯಾವುದೇ ಕಾರಣಕ್ಕೂ ಪತ್ರಕರ್ತರು ಬಿಡಬಾರದು ಎಂದರು.

ಪತ್ರಿಕಾ ವೃತ್ತಿ ಸಮಾಜದ ಅಸಮಾನತೆ ಹೋಗಲಾಡಿಸಲು, ಅವಕಾಶ ವಂಚಿತರ ಪರವಾಗಿ, ಮೀಸಲಾತಿಯ ಆಶಯಗಳ ಪರವಾಗಿ ಇರಬೇಕು. ಇದರಿಂದ ಸಾಮಾಜಿಕ ನ್ಯಾಯವನ್ನು ಧ್ವನಿ ಇಲ್ಲದವರಿಗೆ ಕೊಡಲು ಸಾಧ್ಯ. ಹೀಗಾದಾಗ ಬಸವಣ್ಣನವರ ಸಮ-ಸಮಾಜದ ಆಶಯ ಈಡೇರಲು ಸಾಧ್ಯ. ಪತ್ರಕರ್ತರು ಇದಕ್ಕೆ ಪೂರಕವಾಗಿ ವಸ್ತುನಿಷ್ಠವಾಗಿ ಕೆಲಸ ಮಾಡಬೇಕು ಎಂದು ಸಿಎಂ ಸಿದ್ದರಾಮಯ್ಯ ಆಶಿಸಿದರು.

ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ಅವರ ಸಹಯೋದಲ್ಲಿ ನಡೆದ ಸಮ್ಮೇಳನದ ಅಧ್ಯಕ್ಷತೆಯನ್ನು ಏಗಘಏ ಅಧ್ಯಕ್ಷ ಶಿವಾನಂದ ತಗಡೂರು ವಹಿಸಿದ್ದರು. ಮಾಜಿ ಸಚಿವರಾದ ಶಾಮನೂರು ಶಿವಶಂಕರಪ್ಪ, ತೋಟಗಾರಿಕಾ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಶಾಸಕರಾದ ಮಾಯೊಕೊಂಡ ಬಸಂತಪ್ಪ, ಡಿ.ಜಿ. ಶಾಂತನಗೌಡರು, ಇನ್ ಸೈಟ್ ಸಂಸ್ಥೆ ಸಂಸ್ಥಾಪಕ ನಿರ್ದೇಶಕರಾದ ಜಿ.ಬಿ. ವಿನಯ್ ಕುಮಾರ್ ಸೇರಿ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಪತ್ರಿಕಾ ಸಂಪಾದಕ ಸುದರ್ಶನ ಚನ್ನಂಗಿಹಳ್ಳಿ ಪ್ರಾಸ್ತಾವಿಕವಾಗಿ ಮಾತನಾಡಿದರು. ದಾವಣಗೆರೆ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಇ.ಎಂ. ಮಂಜುನಾಥ್ ಸಮ್ಮೇಳನದ ಆಶಯಗಳನ್ನು ಆಡಿದರು.

# ಸರಳ ಪ್ರಯೋಗಗಳ ಪ್ರಾತ್ಯಕ್ಷಿಕೆ



■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಇಲ್ಲಿನ ಬಟ್ಟೂರ, ದೊಡ್ಡೂರ ಮತ್ತು ಪು.ಬಡ್ನಿ ಕ್ಲಸ್ಟರ್‌ಗಳ ಮಾಸಿಕ ಸಮಾಲೋಚನಾ ಸಭೆ ಶನಿವಾರ ಸ.ಕಿ.ಪ್ರಾ. ಶಾಲೆ ಕುಂದ್ರಳ್ಳಿ ತಾಂಡಾದಲ್ಲಿ ನಡೆಯಿತು.

ಶೇಖರ ಚಿಕ್ಕಣ್ಣವರ ಸಂಪನ್ಮೂಲ ವ್ಯಕ್ತಿಗಳಾಗಿ ಪಾಲ್ಗೊಂಡು, ವಿಜ್ಞಾನ ಪಠ್ಯ ಪುಸ್ತಕದಲ್ಲಿನ ಪ್ರಯೋಗಗಳನ್ನು ಸರಳವಾಗಿ ತಿಳಿಸಿದರಲ್ಲದೆ, ಶಿಕ್ಷಕರು-ಮಕ್ಕಳಿಗೆ ನೋಡಿ ಕಲಿಯುವ ವಾತಾವರಣ ಸೃಷ್ಟಿಸಬೇಕು ಎಂದರು. ಎಸ್‌ಡಿಎಂಸಿ ಅಧ್ಯಕ್ಷ ರಮೇಶ ಲಮಾಣಿ ಅಧ್ಯಕ್ಷತೆ ವಹಿಸಿದ್ದರು.

ಈ ವೇಳೆ ಸಿಆರ್‌ಪಿ ಜಿ.ಆರ್. ಪಾಟೀಲ, ಜಿ.ಎಸ್. ನೇಕಾರ, ಸರಕಾರಿ ನೌಕರ ಸಂಘದ ಸದಸ್ಯರಾದ ಎಸ್.ಕೆ. ಅಮ್ಮಿನಭಾವಿ, ಶಿಕ್ಷಕ ಆರ್.ಎಂ. ಕಮ್ಮಾರ, ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನಾಮನಿರ್ದೇಶಿತ ಸದಸ್ಯ ಎಮ್.ಎಸ್. ಹಿರೇಮಠ, ಡಿ.ಎಲ್. ಪಾಟೀಲ, ಕೆ.ಎಮ್. ಕೊಟ್ರಮ್ಮ ಹಾಜರಿದ್ದರು. ಮುಖ್ಯ ಶಿಕ್ಷಕಿ ಆರ್.ಎಸ್. ಅರಮನಿ ಸ್ವಾಗತಿಸಿದರು. ಎಸ್.ವ್ಹಿ ಸೋಗಿ ನಿರೂಪಿಸಿದರು. ಎಂ.ಬಿ. ಸರವಿ ವಂದಿಸಿದರು.

### ಬಜೆಟ್ ಪೂರ್ವಭಾವಿ ಸಭೆಯಲ್ಲಿ ಅಧಿಕಾರಿಗಳ ವೈಖರಿಗೆ ಗೊಂದಲ

# ಪತ್ರಕರ್ತರ ಭವನಕ್ಕಾಗಿ ಸ್ಥಳ ನಿಗದಿ ಮಾಡಿ

■ ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಪ.ಪಂ ಕಾರ್ಯಾಲಯದಲ್ಲಿ ಶನಿವಾರ 2024-25ನೇ ಸಾಲಿನ ಬಜೆಟ್ ಅಂದಾಜು ಪತ್ರಿಕೆ ತಯಾರಿಸಲು ಸಲಹೆ-ಸೂಚನೆ ನೀಡುವ ಕುರಿತು ಕರೆದಿದ್ದ ಪೂರ್ವಭಾವಿ ಸಭೆ ಪ್ರಾರಂಭದಿಂದಲೇ ಹಳಿ ತಪ್ಪಿದಂತಾಗಿ, ಗೊಂದಲದ ಗೂಡಾಗಿತ್ತು.

ಪ.ಪಂ.ನಲ್ಲಿ ಸದ್ಯ ಆಡಳಿತ ಮಂಡಳಿ ಇಲ್ಲದಿರುವದರಿಂದ, ಸದಸ್ಯರ ಗಮನಕ್ಕೆ ತರದೇ ಇರುವುದಕ್ಕೆ ಲಿಖಿತ ದಾಖಲೆ ಪ್ರದರ್ಶಿಸಿ ಅಧಿಕಾರಿಗಳ ಕಾರ್ಯವೈಖರಿಗೆ ಅಸಮಾಧಾನ ವ್ಯಕ್ತಪಡಿಸಿ, ಸಭೆ ಆರಂಭಕ್ಕೂ ಮುನ್ನ ಸದಸ್ಯ ಫಕ್ಕೀರೇಶ ರಟ್ಟಿಹಳ್ಳಿ ಎದ್ದು ಹೋಗುವ ಮೂಲಕ ಅಸಮಾಧಾನ ವ್ಯಕ್ತಪಡಿಸಿದರು.

ಪಟ್ಟಣ ಪಂಚಾಯತ ವತಿಯಿಂದ ಲಕ್ಷಾಂತರ ರೂ ವ್ಯಯಿಸಿ ನಿರ್ಮಿಸಿದ ಮಳಿಗೆಗಳ ಹರಾಜು ಟೆಂಡರ್ ಪ್ರಕ್ರಿಯೆಯನ್ನು 15 ದಿನಗಳಲ್ಲಿ ಮುಗಿಸುವಂತೆ



ತಹಸೀಲ್ದಾರ ಅನಿಲ ಬಡಿಗೇರ ಇಂಜಿನಿಯರ್ ಮತ್ತು ಮುಖ್ಯಾಧಿಕಾರಿಗೆ ಸೂಚಿಸಿದರು. ತೆರಿಗೆ ಸಂಗ್ರಹವಾಗಬೇಕೆಂದು ಹೇಳುತ್ತೀರಿ, ಇಲ್ಲಿ ನೋಡಿದರೆ ವರ್ಷಗಳೇ ಕಳೆದರೂ ಇನ್ನೂ ಹೊಸ ಮಳಿಗೆಗಳನ್ನು ಹರಾಜು ಮಾಡಿಲ್ಲ ಎಂದು ಅಸಮಾಧಾನ ಹೊರಹಾಕಿದರು. ಪಟ್ಟಣದ ಪ್ರಮುಖ ವೃತ್ತಗಳಲ್ಲಿ ಎಲ್ಲೆಂದರಲ್ಲಿ ಫ್ಲೆಕ್ಸ್-ಬ್ಯಾನರ್‌ಗಳು ಹಾಕಿದ್ದು, ಇವರೆಲ್ಲರೂ ಪರವಾನಿಗೆ ಪಡೆದಿದ್ದಾರೆಯೇ ಎಂದು ಮುಖ್ಯಾಧಿಕಾರಿಯನ್ನು ಪ್ರಶ್ನಿಸಿದಾಗ ಮುಖ್ಯಾಧಿಕಾರಿಯಿಂದ ಇಲ್ಲವೆಂಬ ಉತ್ತರ ಬಂದಿತು. ಈ ಕೂಡಲೇ ಪಟ್ಟಣ ಪಂಚಾಯಿತಿ ಆದಾಯವನ್ನು ಗಮನದಲ್ಲಿಟ್ಟುಕೊಂಡು ಇನ್ನು ಮುಂದೆ ನಿಯಮಾನುಸಾರ ಫ್ಲೆಕ್ಸ್‌ಗಳನ್ನು ಅಳವಡಿಸುವ ಮುಂಚೆ ಕಚೇರಿಯಿಂದ ಪರವಾನಿಗೆಯನ್ನು ಪಡೆಯಲು ತಿಳಿಸುವಂತೆ ಸೂಚಿಸಿದರು.

ಶಿರಹಟ್ಟಿ ಪತ್ರಕರ್ತರ ಬಹುದಿನಗಳ ಬೇಡಿಕೆಯಾದ ಪತ್ರಕರ್ತರ ಭವನ ನಿರ್ಮಾಣಕ್ಕಾಗಿ ಎರಡು ದಶಕಗಳಿಂದ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಈ ಬಾರಿಯ ಬಜೆಟ್‌ನಲ್ಲಿ ಪತ್ರಕರ್ತರ ಭವನಕ್ಕಾಗಿ ಸ್ಥಳ ನಿಗದಿ ಮಾಡಿ ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳಿಗೆ ಕಳುಹಿಸಬೇಕೆಂದು ಪತ್ರಕರ್ತರು ತಹಸೀಲ್ದಾರ್ ಹಾಗೂ ಮುಖ್ಯಾಧಿಕಾರಿಗಳ ಗಮನಕ್ಕೆ ತಂದರು.

ಕಳೆದ ತಿಂಗಳು ಜರುಗಿದ ಗ್ರಾಮದೇವತೆ ದ್ಯಾಮವ್ವ ದೇವಿ ಜಾತ್ರಾ ಮಹೋತ್ಸವದಲ್ಲಿ ರೂ. 70 ಸಾವಿರ ಉಳಿದಿದ್ದು, ಪ.ಪಂ ಅಡಿಯಲ್ಲಿ ಕನಿಷ್ಠ ಒಂದು ಲಕ್ಷ ರೂಗಳನ್ನು ಒದಗಿಸಿದರೆ ಪಟ್ಟಣದ ಹೊರವಲಯದಲ್ಲಿ ಬೃಹತ್ ಸ್ವಾಗತದ್ವಾರ ನಿರ್ಮಾಣ ಮಾಡಲು ಅನುಕೂಲವಾಗುವುದು. ಈ ಸಲಹೆಯನ್ನು ಪರಿಗಣಿಸಬೇಕು ಎಂದು ನಿವೃತ್ತ ಶಿಕ್ಷಕ ಜೆ.ಆರ್. ಕುಲಕರ್ಣಿ ಹೇಳಿದರು. ಪಂಚಾಯತಿ ಸಿಬ್ಬಂದಿ ಮಂಜುನಾಥ ಪಾತಾಳೆ ಬಜೆಟ್ ಈ ಹಿಂದಿನ ಆಯವ್ಯಯದ ಖರ್ಚು-ವೆಚ್ಚದ ಕುರಿತು ಸಭೆಗೆ ಮಾಹಿತಿ ನೀಡಿದರು.

ಪ.ಪಂ ಸದಸ್ಯ ಪರಮೇಶ ಪರಬ, ಗಂಗಮ್ಮ ಆಲೂರ, ಇಸಾಕಅಹ್ಮದ ಆದ್ರಳ್ಳಿ, ದೇವಪ್ಪ ಆಡೂರ, ಹೊನ್ನಪ್ಪ ಶಿರಹಟ್ಟಿ, ಶಿವಕುಮರ ಕಪ್ಪತ್ತನವರ, ಹಸರತ ಡಾಲಾಯತ, ಮುಸ್ತಾಕ ಚೋರಗಸ್ತಿ, ನೀಲವ್ವ ಹುಬ್ಬಳ್ಳಿ, ದಾವಲಬಿ ಮಾಚೇನಹಳ್ಳಿ ಅಭಿಯಂತರ ವಿ.ಪಿ. ಕಾಟೇವಾಲೆ ಮುಂತಾದವರು ಉಪಸ್ಥಿತರಿದ್ದರು.

### ಕರ್ನಾಟಕ ಏಕೀಕರಣ ಚಳುವಳಿ ವಿಚಾರ ಸಂಕಿರಣ ಉದ್ಘಾಟಿಸಿದ ಬಸವರಾಜ ಹೊರಟ್ಟಿ

# ಸುಶಿಕ್ಷಿತರಾಗಿ ಉತ್ತಮ ಜೀವನ ತಮ್ಮದಾಗಿಸಿಕೊಳ್ಳಿ



■ ವಿಜಯಸಾಕ್ಷಿ ಸುದ್ದಿ, ಗದಗ

ಮಕ್ಕಳಿಗೆ ಶಿಕ್ಷಣದೊಂದಿಗೆ ಸಂಸ್ಕಾರ ಅತ್ಯವಶ್ಯ. ಸಂಸ್ಕಾರವಂತ ಯವಕರ ಕೊರತೆ ಸಮಾಜವನ್ನು ಕಾಡುತ್ತಿದ್ದು, ಮಕ್ಕಳಿಗೆ ಪಠ್ಯ-ಪುಸ್ತಕಗಳ ಬೋಧನೆಯೊಂದಿಗೆ ನೈತಿಕ ಶಿಕ್ಷಣವನ್ನೂ ಬೋಧಿಸಬೇಕು ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಶಿಕ್ಷಕರಿಗೆ ಸಲಹೆ ನೀಡಿದರು.

ಕರ್ನಾಟಕ ಪತ್ರಗಾರ ಇಲಾಖೆ, ಪ್ರಾದೇಶಿಕ ಪತ್ರಗಾರ ಇಲಾಖೆ ಧಾರವಾಡ ಹಾಗೂ ಕೆ.ಎಚ್. ಪಾಟೀಲ ಸರಕಾರಿ ಪ್ರಥಮ ದರ್ಜೆ ಕಾಲೇಜು ಹುಲಕೋಟಿ ಇವರುಗಳ ಸಹಯೋಗದಲ್ಲಿ ಹುಲಕೋಟಿಯ ಸ್ವಾಮಿ ವಿವೇಕಾನಂದ ಪಿಯು ಕಾಲೇಜಿನಲ್ಲಿ ಶನಿವಾರ ಜರುಗಿದ ಕರ್ನಾಟಕ ಏಕೀಕರಣ ಚಳುವಳಿ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮತನಾಡಿದರು.

ತಂದೆ-ತಾಯಿಗಳು ತಮ್ಮ ಸರ್ವಸ್ವವನ್ನು ತ್ಯಜಿಸಿ ಮಕ್ಕಳ ಭವಿಷ್ಯ ರೂಪಿಸಲು ಬದುಕಿನ ಬಂಡಿ ದೂಡುತ್ತಾರೆ. ಅವರ ಆಶಯಕ್ಕೆ ಧಕ್ಕೆ ಬಾರದಂತೆ ಮಕ್ಕಳು ತಮ್ಮ ಭವಿಷ್ಯ ರೂಪಿಸಿಕೊಂಡು ಹೆತ್ತವರಿಗೆ ಹೆಸರು ತರಬೇಕು. ಸುಶಿಕ್ಷಿತರಾಗಿ ಉತ್ತಮ ಜೀವನ ತಮ್ಮದಾಗಿಸಿಕೊಳ್ಳಬೇಕು. ಕಾಲ ಬದಲಾದಂತೆ ಶೈಕ್ಷಣಿಕ ವ್ಯವಸ್ಥೆ ಬದಲಾಗುತ್ತಿದೆ. ಬದಲಾವಣೆಯ ನಡುವೆಯೂ ಮಕ್ಕಳು ಪಾಲಕರಿಗೆ, ಪೋಷಕರಿಗೆ, ಕಲಿಸಿದ ಗುರುಗಳಿಗೆ ಗೌರವ ನೀಡುವದರೊಂದಿಗೆ ಹುಟ್ಟಿದ ಊರು, ಕಷ್ಟ ಕಾಲದಲ್ಲಿ ಸಹಾಯವಾದವರನ್ನು ಎಂದೂ ಮರೆಯದಂತೆ ಕಿವಿಮಾತು ಹೇಳಿದರು.

ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಅನೇಕ ಮಹನೀಯರು ಹೋರಾಟ ಮಾಡಿದ್ದಾರೆ. ಅದರಲ್ಲಿ ಗದಗ ಜಿಲ್ಲೆಯ ಪಾತ್ರ ಬಹು ಪ್ರಮುಖವಾಗಿದೆ. ಪತ್ರಗಾರ ಇಲಾಖೆಯು ಮಹತ್ವದ ದಾಖಲೆಗಳನ್ನು ಪ್ರದರ್ಶನಕ್ಕೆ ಇಟ್ಟಿದೆ. ವಿಧ್ಯಾರ್ಥಿಗಳು ದಾಖಲೆಗಳ ಬಗ್ಗೆ ಅರಿತುಕೊಂಡು ಜ್ಞಾನ ಬೆಳೆಸಿಕೊಳ್ಳುವದರ ಮೂಲಕ ಸಧೃಡ ರಾಷ್ಟ್ರ ನಿರ್ಮಾಣಕ್ಕೆ ಮುಂದಾಗುವಂತೆ ಬಸವರಾಜ ಹೊರಟ್ಟಿ ತಿಳಿಸಿದರು.

ಮಾಜಿ ಶಾಸಕ ಡಿ.ಆರ್. ಪಾಟೀಲ ಮಾತನಾಡಿ, ಗುರಿ ಸಾಧನೆಗೆ ಯಾರನ್ನೂ ವೈಯಕ್ತಿಕವಾಗಿ ದ್ವೇಷಿಸಬಾರದು. ಬೇರೊಬ್ಬರಿಗೆ ಚ್ಯುತಿ ಬಾರದಂತೆ ನಡೆದುಕೊಳ್ಳಬೇಕು. ವಿದ್ಯಾರ್ಥಿಗಳು ನಿಸ್ವಾರ್ಥ ಭಾವನೆಯನ್ನು ಬೆಳೆಸಿಕೊಳ್ಳಬೇಕು. ಪಠ್ಯ-ಪುಸ್ತಕಗಳ ಬೋಧನೆಯಿಂದ ಉದ್ಯೋಗ ದೊರಕಬಹುದಾದರೂ ಇಂದಿನ ವಿದ್ಯಾರ್ಥಿಗಳಿಗೆ ನೈತಿಕ ಶಿಕ್ಷಣದ ಅವಶ್ಯಕತೆಯಿದೆ. ಮೌಲ್ಯಗಳ ಕುರಿತು ತಿಳಿ ಹೇಳುವ ಕಾರ್ಯವಾಗಿಬೇಕಾಗಿದೆ. ಏಕೀಕರಣ ಚಳುವಳಿಯಲ್ಲಿ ಭಾಗವಹಿಸಿದ್ದ ಗದುಗಿನ ಮಹನೀಯರ ದಾಖಲೆಗಳನ್ನು ಜಾಲತಾಣಗಳಲ್ಲಿ ದಾಖಲೀಕರಿಸಿ ಕರ್ನಾಟಕ ಏಕೀಕರಣದ ಇತಿಹಾಸವನ್ನು ಸಮಾಜಕ್ಕೆ ಹೇಳುವ ಕಾರ್ಯವಾಗಬೇಕು ಎಂದರು.

ಪತ್ರಾಗಾರ ಇಲಾಖೆ ನಿರ್ದೇಶಕ ಗವಿಸಿದ್ದಯ್ಯ ಪ್ರಾಸ್ತಾವಿಕವಾಗಿ ಮಾತನಾಡಿ, ಸಮಾಜದ ಗಣ್ಯ ವ್ಯಕ್ತಿ, ಮಠ ಮಾನ್ಯಗಳಲ್ಲಿ ಹಾಗೂ ರಾಜ್ಯದ ಇತರೆ ಭಾಗದಲ್ಲಿ ಸಿಗುವ ಮಹತ್ವದ ದಾಖಲೆಗಳನ್ನು ಸಂಗ್ರಹಿಸಿ, ಸಂರಕ್ಷಿಸುವ ಕೆಲಸವನ್ನು ಇಲಾಖೆ ಮಾಡುತ್ತಿದೆ. 1.40 ಲಕ್ಷಕ್ಕೂ ಅಧಿಕ ದಾಖಲೆಗಳನ್ನು ರಾಜ್ಯ ಪತ್ರಾಗಾರ ಇಲಾಖೆ ಸಂರಕ್ಷಿಸುತ್ತಿದೆ. ಸ್ವಾತಂತ್ರ್ಯ ನಂತರ, ಅದಕ್ಕೂ ಪೂರ್ವದ ಮಹತ್ವದ ದಾಖಲೆಗಳನ್ನು ಜನರು ಅವಲೋಕಿಸಿ ಜ್ಞಾನ ವೃದ್ಧಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಗದಗ ತಹಸೀಲ್ದಾರ ಶ್ರೀನಿವಾಸಮೂರ್ತಿ ಕುಲಕರ್ಣಿ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಂ.ಎ. ರಡ್ಡೇರ, ಕೆ.ಎಚ್.ಪಾಟೀಲ ಸ.ಪ್ರ.ದ ಕಾಲೇಜಿನ ಇತಿಹಾಸ ಪ್ರಾಧ್ಯಾಪಕ ಡಾ.ಅಪ್ಪಣ್ಣ. ಹಂಜೆ, ಗಣ್ಯರಾದ ಜೆ.ಕೆ. ಜಮಾದಾರ, ಕಾಲೇಜಿನ ಬೋಧಕ-ಬೋಧಕೇತರ ಸಿಬ್ಬಂದಿಗಳು ಉಪಸ್ಥಿತರಿದ್ದರು. ಕಾಲೇಜಿನ ಪ್ರಾಚಾರ್ಯ ಶಿವಪ್ಪ ಕುರಿ ಸ್ವಾಗತಿಸಿದರು. ಬಾಬಹುಬಲಿ ಜೈನರ ಕಾರ್ಯಕ್ರಮ ನಿರೂಪಿಸಿದರು. ಧಾರವಾಡ ಪ್ರಾದೇಶಿಕ ಪತ್ರಾಗಾರ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕಿ ಮಂಜುಳಾ ಯಲಿಗಾರ ವಂದಿಸಿದರು. ಪಂ.ವೆಂಕಟೇಶ ಅಲಕೋಡ ಹಾಗೂ ಸಂಗಡಿಗರು ನಾಡಗೀತೆ ಪ್ರಸ್ತುತಪಡಿಸಿದರು.

# ಮಕ್ಕಳಿಗೆ ಸಮಾಜ ಕಟ್ಟುವ ಸಾಮರ್ಥ್ಯ ನೀಡಿ



■ ವಿಜಯಸಾಕ್ಷಿ ಸುದ್ದಿ, ಹರಪನಹಳ್ಳಿ

ಮಕ್ಕಳಿಗೆ ಓದುವ ಹವ್ಯಾಸಕ್ಕಿಂತ ಸಮಾಜವನ್ನು ಎದುರಿಸಲು ಬೇಕಾದ ಜಾಣ್ಮೆಯನ್ನು ಕಲಿಸಬೇಕಿದೆ ಎಂದು ಶಾಸಕರಾದ ಎಂ.ಪಿ. ಲತಾ ಮಲ್ಲಿಕಾರ್ಜುನ ಹೇಳಿದರು.

ತಾಲೂಕಿನ ಆದರ್ಶ ವಿದ್ಯಾಲಯದಲ್ಲಿ 'ಆದರ್ಶ ವೈಭವ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಇಂದಿನ ಸಮಾಜದಲ್ಲಿ ಶಾರೀರಿಕ ಆರೋಗ್ಯದಂತೆ ಮಾನಸಿಕ ಆರೋಗ್ಯವೂ ಬಹಳ ಮುಖ್ಯ. ಪಾಲಕರು ತಮ್ಮ ಮಕ್ಕಳಿಗೆ ಉತ್ತಮವಾದ ಹವ್ಯಾಸಗಳನ್ನು ಬೆಳೆಸುವ ಮೂಲಕ ಮಕ್ಕಳಲ್ಲಿ ಮಾನಸಿಕ ದೃಢತೆಯನ್ನು ಬೆಳೆಸಬೇಕು. ಇತ್ತೀಚಿಗೆ ಟಿ.ವಿ, ಮೊಬೈಲ್ ಬಳಿಕೆ ಹೆಚ್ಚಾಗಿದ್ದು, ಮಕ್ಕಳ ಕೈಯಲ್ಲಿ ಮೊಬೈಲ್ ಕೊಡದೆ ಓದುವ ಅಭ್ಯಾಸ, ಪುಸ್ತಕದ ರುಚಿ, ಮಹನೀಯರ ಬಗ್ಗೆ ಓದುವ ಅಭ್ಯಾಸ ಬೆಳೆಸಿ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಯು.ಬಸವರಾಜಪ್ಪ ಮಾತನಾಡಿ, ತಾಲೂಕಿನ ಶೈಕ್ಷಣಿಕ ವ್ಯವಸ್ಥೆಯನ್ನು ಸುಧಾರಿಸುವ ನಿಟ್ಟಿನಲ್ಲಿ ಶಾಸಕರು ಪ್ರೋತ್ಸಾಹ ನೀಡುತ್ತಿದ್ದು, ಮುಂದಿನ ಐದು ವರ್ಷಗಳಲ್ಲಿ ಇನ್ನುಷ್ಟು ಉತ್ತಮಗೊಳಿಸುವ ನಿಟ್ಟಿನಲ್ಲಿ ಶ್ರಮ ಪಡುತ್ತಿದ್ದಾರೆ ಎಂದರು.

ಎಸ್‌ಡಿಎಂಸಿ ಅಧ್ಯಕ್ಷ ಬಸವನಗೌಡ ಮಾತನಾಡಿದರು. ನೀಲಗುಂದ ಗ್ರಾ.ಪಂ. ಅಧ್ಯಕ್ಷರಾದ ಅನ್ನಪೂರ್ಣ, ಶಾಲೆಯ ಮುಖ್ಯ ಶಿಕ್ಷಕ ಎಚ್.ಕೆ. ಚಂದ್ರಪ್ಪ, ಕಸಾಪ ಅಧ್ಯಕ್ಷ ಕೆ.ಉಚ್ಚೆಂಗೆಪ್ಪ, ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ಷಣ್ಮುಖಪ್ಪ, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಜಯರಾಜ್, ಪ್ರಮುಖರಾದ ನೇತ್ರಾವತಿ, ಸಿದ್ದನಗೌಡ, ಕೆ.ಕಲ್ಲಹಳ್ಳಿ ಗೋಣೆಪ್ಪ, ಸನಾವುಲ್ಲಾ, ಶಿಲಾನಾಯ್ಕ, ರಾಧ, ಕವಿತ, ಶಾರದ, ಶಿಕ್ಷಕರಾದ ರೇವಣಸಿದ್ದಪ್ಪ, ಪರ್ವಿನಬಾನು, ಕವಿತಾ, ಕಿರಣ, ಸಂತೋಷ, ಸೂರ್ಯನಾಯ್ಕ, ದಾದಸಾಲಂ, ನಾಗರಾಜ, ಸಲಾಂ ಸಾಹೇಬ್, ಪುಷ್ಪ, ಅನೀತಾ, ಮಲ್ಲಮ್ಮ, ಕಾರ್ತಿಕ, ಸುರೇಶ, ಮೇಘನಾ, ನಾಗೇಂದ್ರಪ್ಪ ಮುಂತಾದವರಿದ್ದರು.

## ಡಾ. ಬಿ.ಎಸ್. ರಾಠೋಡರಿಗೆ 'ಕ್ಯಾಪ್ಟನ್' ಪದವಿ



■ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿನ ವಿದ್ಯಾದಾನ ಸಮಿತಿ ಬಾಲಕಿಯರ ಪ.ಪೂ ಕಾಲೇಜಿನ ಹಿಂದಿ ಉಪನ್ಯಾಸಕರಾದ ಡಾ. ಬಿ.ಎಸ್. ರಾಠೋಡ ಇವರು ಇತ್ತೀಚೆಗೆ ಕಾಮಟೆಯಲ್ಲಿ ನಡೆದ ಎನ್.ಸಿ.ಸಿ. ತರಬೇತಿಯನ್ನು ಯಶಸ್ವಿಯಾಗಿ ಪೂರೈಸಿ, 'ಕ್ಯಾಪ್ಟನ್' ಆಗಿ ಪದೋನ್ನತಿ ಹೊಂದಿದ ನಿಮಿತ್ತ ತೋರಣಗಲ್‌ನಲ್ಲಿ ನಡೆದ 'ಏಕ ಭಾರತ ಶ್ರೇಷ್ಠ ಭಾರತ' ರಾಷ್ಟ್ರೀಯ ಕ್ಯಾಂಪ್‌ನಲ್ಲಿ 38 ಕರ್ನಾಟಕ ಬಟಾಲಿಯನ್‌ನ ಕಮಾಂಡಿಂಗ್ ಆಫೀಸರ್ ಕರ್ನಲ್ ಎಸ್.ಪಿ. ಯಾದವ ಹಾಗೂ ಸುಬೇದಾರ ಮೇಜರ್ ಮಲ್ಲಪ್ಪ ಬ್ಯಾಳಿ, ರಾಠೋಡರಿಗೆ ಪದಕಧಾರಣೆ ಮಾಡಿ ಸನ್ಮಾನಿಸಿ ಅಭಿನಂದಿಸಿದರು.

ಈ ಸಂದರ್ಭದಲ್ಲಿ ಎನ್.ಸಿ.ಸಿ. ಅಧಿಕಾರಿಗಳಾದ ಕ್ಯಾಪ್ಟನ್ ಸಾಯಿಬಾಬಾ ಜಾಧವ, ಫಸ್ಟ್ ಆಫಿಸರ್ ಶ್ರೀಕಾಂತ ಕರಡಿ, ಆರ್ಮಿ ಆಫೀಸರ್ಸ್ ಹಾಗೂ ನೂರಾರು ಕೆಡೆಟ್‌ಗಳು ಉಪಸ್ಥಿತರಿದ್ದರು.

### ನರೇಗಲ್ ಪಟ್ಟಣದಲ್ಲಿ ತಮಿಳುನಾಡಿನ ಮುತ್ತು ಸೆಲ್ವಂಗೆ ಸನ್ಮಾನ

## ಅಪ್ಪು ಅಭಿಮಾನಿಯ ಸೈಕಲ್ ಪರ್ಯಟನೆ

■ವಿಜಯಸಾಕ್ಷಿ ಸುದ್ದಿ, ನರೇಗಲ್

ತಮಿಳುನಾಡಿನ ಕೊಯಮತ್ತೂರು ಜಿಲ್ಲೆಯ ಪೊಲ್ಲಾಚಿ ಗ್ರಾಮದ ನಿವಾಸಿ ಕನ್ನಡದ ನಟ ದಿ.ಪುನೀತ್ ರಾಜಕುಮಾರ ಅವರ ಅಭಿಮಾನಿ, ಮುತ್ತುಸೆಲ್ವಂ ಅವರು ಸೈಕಲ್ ಮೂಲಕ ದೇಶಾದ್ಯಂತ ಸಂಚಾರ ಕೈಗೊಂಡಿದ್ದು, ಎಲ್ಲೆಡೆ ಅಪ್ಪು ಅವರ ಮಾನವೀಯ ಮುಖವನ್ನು ಪರಿಚಯಿಸುವ ಹಾಗೂ ಅವರ ಹೆಸರಿನಲ್ಲಿ ಸಸಿಗಳನ್ನು ನೆಡುವ ಕೆಲಸವನ್ನು ಮಾಡುತ್ತಿದ್ದಾರೆ.

ಅವರು ನರೇಗಲ್ ಪಟ್ಟಣಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಸ್ಥಳೀಯ ಎಸ್‌ಆರ್‌ಕೆ. ಫಿಟ್ನೆಸ್ ಹಾಗೂ ಅಪ್ಪು ಅಭಿಮಾನಿಗಳು ಸನ್ಮಾನಿಸಿದರು. ಈ ವೇಳೆ ಮಾತನಾಡಿದ ತಮಿಳಿಗಮುತ್ತುಸೆಲ್ವಂ, ಪುನೀತ್ ರಾಜಕುಮಾರ ಅವರ ಮಾನವೀಯ ಗುಣವನ್ನು ಅಕ್ಕಪಕ್ಕದ ದೇಶಗಳಿಗೆ ಹಾಗೂ ಭಾರತದ ಎಲ್ಲಾ ತಾಲ್ಲೂಕು, ಹೋಬಳಿ ಕೇಂದ್ರಗಳಿಗೆ ತಿಳಿಸಬೇಕು ಮತ್ತು ಅವರ ಹೆಸರಿನಲ್ಲಿ ಸಸಿ ನೆಡುವ ಮೂಲಕ ಪರಿಸರ ಜಾಗೃತಿ ಮೂಡಿಸಬೇಕು ಎನ್ನುವ ಉದ್ದೇಶದೊಂದಿಗೆ ಸೈಕಲ್ ಸವಾರಿ ಕೈಗೊಂಡಿದ್ದೇನೆ ಎಂದರು.

ಸೈಕಲ್ ಸೇರಿದಂತೆ 192 ಕೆಜಿ ತೂಕದ ಅಗತ್ಯ ವಸ್ತುಗಳ ಸಮೇತ ಸವಾರಿ ಮಾಡುತ್ತಿದ್ದೇನೆ.



ಸೈಕಲ್ ಮೇಲೆ ತ್ರಿವರ್ಣ ಧ್ವಜ, ಪಕ್ಕದಲ್ಲಿಯೇ ನಾಡಧ್ವಜ, ಅದರಲ್ಲಿ ಕರ್ನಾಟಕ ರತ್ನ ದಿ.ಪುನೀತ್ ರಾಜ್‌ಕುಮಾರ್ ಭಾವಚಿತ್ರ ಇದೆ. ಡಿಸೆಂಬರ್-21, 2021ಕ್ಕೆ ಆರಂಭವಾದ ಈ ಸವಾರಿಯಲ್ಲಿ ನೇಪಾಳ, ಬಾಂಗ್ಲಾದೇಶ ಹಾಗೂ ವಿಯಟ್ನಾಂ ದೇಶಗಳನ್ನು, ಭಾರತದ 19 ರಾಜ್ಯಗಳ 448 ಜಿಲ್ಲೆಗಳನ್ನು ಸುತ್ತಿದ್ದೇನೆ. ಜನವರಿ-5, 2025ಕ್ಕೆ ಇಂಡಿಯಾ ಗೇಟ್ ಬಳಿ ಸವಾರಿ ಮುಕ್ತಾಯಗೊಳ್ಳಲಿದೆ. ಸದ್ಯ 20600 ಕಿಮೀ ಸಂಚರಿಸಿದ್ದು 2,49,600 ಸಸಿಗಳನ್ನು ನೆಟ್ಟಿದ್ದೇನೆ. ಇದು ಗಿನ್ನಿಸ್ ದಾಖಲೆಗೆ ಸೇರ್ಪಡೆಯಾಗಿದೆ ಎಂದರು.

ವೈದ್ಯ ಡಾ. ನಾಗರಾಜ ಎಲ್.ಗ್ರಾಮಪುರೋಹಿತ್ ಮಾತನಾಡಿ, ಮಳೆ-ಚಳಿಯನ್ನೂ ಲೆಕ್ಕಿಸದೇ 34 ಸಾವಿರಕ್ಕೂ ಹೆಚ್ಚು ಕಿಮೀ ಸೈಕಲ್ ಸವಾರಿ ಮೂಲಕ ಪರ್ಯಟನೆ ಕೈಗೊಂಡಿರುವುದು ಕೃತಜ್ಞತಾ ಭಾವನೆಗೆ ಉದಾಹರಣೆಯಾಗಿದೆ ಎಂದರು.

ಈ ಸಂದರ್ಭದಲ್ಲಿ ಅಪ್ಪು ಎಸ್. ಆರ್, ಮೊಹಮ್ಮದ್ ನಶೇಖಾನ್, ನಾನು ಮಾಳೋತ್ತರ, ಗಂಗಾಧರ್ ಮಡಿವಾಳರ, ಸಿದ್ದಲಿಂಗಯ್ಯ ಎಂ.ಜಿ, ರೈಮಾನ್ ಮಾರನಬಸರಿ, ಯೂಸುಫ್ ನವಲಗುಂದ, ಅನಿಲ ಪಾಚಂಗಿ ಮುಂತಾದವರಿದ್ದರು.

> ಸೈಕಲ್‌ಗೆ ಜಿಪಿಎಸ್ ಅಳವಡಿಸಿದ್ದು, ಪ್ರತಿ ಜಿಲ್ಲೆಯ ಜಿಲ್ಲಾಧಿಕಾರಿ, ಪೊಲೀಸ್ ವರಿಷ್ಠಾಧಿಕಾರಿ, ತಾಲ್ಲೂಕಿನ ತಹಸೀಲ್ದಾರ, ಪಿ.ಎಸ್.ಐ ಹಾಗೂ ಹೋಬಳಿಯ ಪಿಡಿಒಗಳ ಸಹಿ, ಫೋಟೋ ತೆಗೆದುಕೊಳ್ಳುತ್ತಿದ್ದೇನೆ. ದೇಶ-ವಿದೇಶಗಳಲ್ಲಿಯೂ ಅಪ್ಪು ಅಭಿಮಾನಿ ಎಂದ ತಕ್ಷಣ ಎಲ್ಲರೂ ಗೌರವ ಕೊಡುತ್ತಾರೆ. ಊಟ ನೀಡಿ ಆಶ್ರಯ ಕೊಡುತ್ತಾರೆ. ಕೆಲವರು ಕೈಲಾದಷ್ಟು ಸಹಾಯ ಮಾಡಿ ಶುಭ ಹಾರೈಸುತ್ತಿದ್ದಾರೆ.
>
> **- ಮುತ್ತುಸೆಲ್ವಂ.**
> ರಾಜರತ್ನ ದಿ. ಅಪ್ಪು ಅಭಿಮಾನಿ.

## ಶರಣ ಸಂಗಮ ಕಾರ್ಯಕ್ರಮ ಇಂದು

■ವಿಜಯಸಾಕ್ಷಿ ಸುದ್ದಿ, ಗದಗ



ಇಲ್ಲಿನ ಶಿವಾನಂದ ನಗರದ ಬಸವ ಸಮುದಾಯ ಭವನದಲ್ಲಿ ಫೆ.4ರಂದು ಬೆಳಿಗ್ಗೆ 11ಕ್ಕೆ ನಡೆಯಲಿರುವ ಬಸವದಳದ 1579ನೇ ಶರಣ ಸಂಗಮದಲ್ಲಿ ಶರಣ ಮಡಿವಾಳ ಮಾಚಯ್ಯನವರ ಜಯಂತಿ ಕುರಿತು ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಅಧ್ಯಕ್ಷತೆಯನ್ನು ಬಸವದಳದ ಅಧ್ಯಕ್ಷ, ಶರಣ ವಿ.ಕೆ. ಕರೇಗೌಡ್ರ ವಹಿಸುವರು. ಶರಣೆ ಗಿರಿಜಕ್ಕ ಧರ್ಮರಡ್ಡಿ ಉಪನ್ಯಾಸ ಮಾಡುವರು. ಅತಿಥಿಗಳಾಗಿ ಮಡಿವಾಳ ಮಾಚಿದೇವರ ಕ್ಷೇಮಾಭಿವೃದ್ಧಿ ಸಂಘದ ಶರಣ ಮಹೇಶ ಎಲ್.ಮಡಿವಾಳ ಆಗಮಿಸುವರು.

ಬಸವದಳದ ಸದಸ್ಯರು, ಶರಣ ಸಾಹಿತ್ಯಾಭಿಮಾನಿಗಳು ಹಾಗೂ ಆಸಕ್ತರು ಭಾಗವಹಿಸಬೇಕೆಂದು ಸಂಘಟಕರ ಪರವಾಗಿ ಪ್ರಕಾಶ ಅಸುಂಡಿಯವರು ವಿನಂತಿಸಿದ್ದಾರೆ.

## ಶುಶ್ರೂಷಕರು ನಿಸ್ವಾರ್ಥವಾಗಿ ಕಾರ್ಯ ನಿರ್ವಹಿಸಬೇಕು

■ವಿಜಯಸಾಕ್ಷಿ ಸುದ್ದಿ, ಗದಗ




ನರ್ಸಿಂಗ್ ವೃತ್ತಿಯಲ್ಲಿ ಜ್ಞಾನ ಹಾಗೂ ಕೌಶಲ್ಯದ ಜೊತೆಗೆ ಸಮರ್ಪಣಾ ಭಾವದಿಂದ ಕಾರ್ಯ ನಿರ್ವಹಿಸುವುದು ಅವಶ್ಯವಿದೆ ಎಂದು (ಡಿಮಾನ್ಸ್) ನರ್ಸಿಂಗ್ ಕಾಲೇಜಿನ ಪ್ರಾಚಾರ್ಯರಾದ ಡಾ. ಆರ್. ಶ್ರೀವಾಣಿ ಕರೆ ನೀಡಿದರು.

ನಗರದ ಸಂಕನೂರ ಇನ್‌ಸ್ಟಿಟ್ಯೂಟ್ ಆಫ್ ನರ್ಸಿಂಗ್ ಕಾಲೇಜಿನಲ್ಲಿ ಫ್ಲಾರೆನ್ಸ್ ನೈಟಿಂಗೇಲ್ ಅವರ ಗೌರವಾರ್ಥವಾಗಿ ಆಯೋಜಿಸಿದ್ದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ನರ್ಸಿಂಗ್ ಕ್ಷೇತ್ರದಲ್ಲಿ ಗುಣಮಟ್ಟವನ್ನು ಹೆಚ್ಚಿಸುವ ದೃಷ್ಟಿಯಿಂದ ಹೊಸ ಪಠ್ಯಕ್ರಮ ಹಾಗೂ ಕಾನೂನುಗಳನ್ನು ಜಾರಿಗೆ ತರುತ್ತಿದ್ದು, ಈ ಕುರಿತು ಜಾಗೃತಿ ವಹಿಸಿ ಅಧ್ಯಯನಶೀಲರಾಗಬೇಕೆಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಡಿವೈಎಸ್‌ಪಿ ವಿದ್ಯಾನಂದ ನಾಯಕ ಮಾತನಾಡಿ, ದಾದಿಯರು ರೋಗಿಗಳನ್ನು ಗುಣಪಡಿಸುವಲ್ಲಿ ನಿಸ್ವಾರ್ಥ ಭಾವನೆಯಿಂದ ಪ್ರಾಮಾಣಿಕವಾಗಿ ಕಾರ್ಯ ಮಾಡುತ್ತಿದ್ದು, ಅವರನ್ನು ಗೌರವ ಹಾಗೂ ಕೃತಜ್ಞತಾ ಭಾವನೆಯಿಂದ ಕಾಣಬೇಕೆಂದರು. ಅಧ್ಯಕ್ಷತೆ ವಹಿಸಿದ್ದ ವಿ.ಪ ಸದಸ್ಯ ಎಸ್.ವಿ. ಸಂಕನೂರ ಮಾತನಾಡಿ, ನರ್ಸಿಂಗ್ ವಿದ್ಯಾರ್ಥಿಗಳ ಜೀವನದಲ್ಲಿ ದೀಪ ಬೆಳಗಿಸುವ ಕಾರ್ಯಕ್ರಮ ಅತ್ಯಂತ ಪ್ರಮುಖವಾಗಿದೆ ಎಂದರು.

ಉಪನ್ಯಾಸಕಿ ರಶ್ಮಿ ಪಾಟೀಲ ಸ್ವಾಗತಿಸಿದರು. ಪ್ರಾಚಾರ್ಯೆ ಮೀನಾಕ್ಷಿ ದೇವಾಂಗಮಠ ವಾರ್ಷಿಕ ವರದಿ ಮಂಡಿಸಿದರು. ಉಪನ್ಯಾಸಕಿ ಕವಿತಾ ಪವಾರ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಡಾ. ಪವನ ಪಾಟೀಲ, ಡಾ. ಪ್ರಕಾಶ ಸಂಕನೂರ, ಡಾ. ರಾಜೇಶ ಜನ್ನಾ, ಡಾ. ಆದಿತ್ಯ ಗೋಡಖಿಂಡಿ, ಡಾ. ಜಿತೇಂದ್ರ ಲಿಂಗಾರೆಡ್ಡಿ, ಡಾ. ಶ್ವೇತಾ ಸಂಕನೂರ ಹಾಗೂ ಚಿರಾಯು ಆಸ್ಪತ್ರೆಯ ಸಿಬ್ಬಂದಿಯವರು ಹಾಗೂ ಪಾಲಕರು ಭಾಗವಹಿಸಿದ್ದರು. ಉಪ ಪ್ರಾಂಶುಪಾಲರಾದ ವಿನ್ಸೆಂಟ್ ಪಾಟೀಲ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

## ಶರಣ ಸಾಹಿತ್ಯ ಪರಿಷತ್ತಿನ ದತ್ತಿ ಉಪನ್ಯಾಸ ಇಂದು

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಹಾಗೂ ಜಿಲ್ಲಾ ಕದಳಿ ಮಹಿಳಾ ವೇದಿಕೆ ಮತ್ತು ತಾಲೂಕಾ ಶರಣ ಸಾಹಿತ್ಯ ಪರಿಷತ್ತು-ಕದಳಿ ಮಹಿಳಾ ವೇದಿಕೆಯ ಸಹಯೋಗದಲ್ಲಿ ಸುತ್ತೂರು ಜಗದ್ಗುರು ಶ್ರೀ ಚನ್ನಬಸವ ದೇಶಿಕೇಂದ್ರ ಮಹಾಸ್ವಾಮಿಗಳವರ ದತ್ತಿ ಉಪನ್ಯಾಸ ಕಾರ್ಯಕ್ರಮವು ಶ್ರೀಮತಿ ಪ್ರೇಮಾ. ಬಿ.ಮೇಟಿ ಅವರ ಪಂಚಾಕ್ಷರಿ ನಗರದ ಮಹಾಮನೆ 'ಶಿವಗಂಗಾ ಸಂಗಮೇಶ್ವರ ಕೃಪಾ'ದಲ್ಲಿ ಫೆ.4ರಂದು ಸಾಯಂಕಾಲ 4.30 ಗಂಟೆಗೆ ನೆರವೇರಲಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಚನ್ನಬಸಪ್ಪ ಕಂಠಿ ವಹಿಸುವರು. 'ವಚನಕಾರರ ವೈಚಾರಿಕ ನಿಲುವು' ವಿಷಯದ ಕುರಿತು ಉಪನ್ಯಾಸವನ್ನು ಜೆಸಿಟಿಎಂ ಪ.ಪೂ ಮಹಾವಿದ್ಯಾಲಯದ ಕನ್ನಡ ಉಪನ್ಯಾಸಕ ಡಾ. ಅರ್ಜುನ ಗೋಳಸಂಗಿ ನೆರವೇರಿಸುವರು.

ಕಾರ್ಯಕ್ರಮದಲ್ಲಿ ಗದಗ ಜಿಲ್ಲಾ ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಸುಧಾ ಹುಚ್ಚಣ್ಣವರ, ಪ್ರೇಮಾ ಮೇಟಿ, ಪ್ರಕಾಶ್ ಅಸುಂಡಿ, ಸುಲೋಚನ ಐಹೊಳಿ ಮುಂತಾದವರು ಉಪಸ್ಥಿತರಿರುವರು ಎಂದು ಪರಿಷತ್ತಿನ ಕಾರ್ಯದರ್ಶಿ ರಾಜಶೇಖರ್ ದಾನರಡ್ಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಕೆ.ಎಚ್. ಪಾಟೀಲ ಸ.ಪ್ರ.ದ ಕಾಲೇಜು ಆವರಣದಲ್ಲಿ ಫೆ.5ರಂದು ಜರುಗಲಿರುವ ಕಾರ್ಯಕ್ರಮಗಳು

## ಕರ್ನಾಟಕ ಏಕೀಕರಣ ಚಳುವಳಿ ವಿಚಾರ ಗೋಷ್ಠಿಗಳು

■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ-50 ಹಾಗೂ ಕರ್ನಾಟಕ ನಾಮಕರಣ 50ರ ಮಹೋತ್ಸವ, ಕೆ.ಎಚ್. ಪಾಟೀಲ ಸರಕಾರಿ ಪ್ರಥಮ ದರ್ಜೆ ಕಾಲೇಜು ಹುಲಕೋಟಿ ಗದಗ ಇವರ ಸಹಯೋಗದಲ್ಲಿ ಕರ್ನಾಟಕ ಏಕೀಕರಣ ಚಳುವಳಿ ವಿಚಾರ ಸಂಕಿರಣ ಹಾಗೂ ಐತಿಹಾಸಿಕ ದಾಖಲೆಗಳ ಮತ್ತು ಛಾಯಾಚಿತ್ರಗಳ ಪ್ರದರ್ಶನದ ಸಮಾರಂಭದ ನಿಮಿತ್ತ ಫೆಬ್ರುವರಿ 5ರಂದು ಹುಲಕೋಟಿಯ ಕೆ.ಎಚ್. ಪಾಟೀಲ ಸ.ಪ್ರ.ದ ಕಾಲೇಜು ಆವರಣದಲ್ಲಿ ಜರುಗಲಿರುವ ಕಾರ್ಯಕ್ರಮಗಳು ಹೀಗಿವೆ.

ಬೆಳಿಗ್ಗೆ 10.30 ಗಂಟೆಗೆ ಕೆ.ಎಚ್.ಪಾಟೀಲ ವೇದಿಕೆಯಲ್ಲಿ ವಿಚಾರಗೋಷ್ಠಿ-7 ಜರುಗಲಿದೆ. ಕ.ವಿ.ವಿ. ಪ್ರಾಚೀನ ಭಾರತದ ಇತಿಹಾಸ ಮತ್ತು ಶಾಸನಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ.ಲೋಕೇಶ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.

ಸಂಪನ್ಮೂಲ ವ್ಯಕ್ತಿಗಳಾಗಿ ಹುಲಕೋಟಿ ಕೆ.ಎಚ್. ಪಾಟೀಲ ಸ.ಪ್ರ.ದ ಕಾಲೇಜಿನ ಇತಿಹಾಸ ಪ್ರಾಧ್ಯಾಪಕ ಡಾ.ಅಪ್ಪಣ್ಣ ಹಂಜೆ 'ಗದಗ ಜಿಲ್ಲೆಗೆ ರಾಷ್ಟ್ರೀಯ ನಾಯಕರ ಭೇಟಿ' ಕುರಿತು, ಹಿರಿಯ ಸಾಹಿತಿ ಡಾ.ಡಿ.ವಿ. ಬಡಿಗೇರ 'ಏಕೀಕರಣ ಮತ್ತು ಸ್ವತಂತ್ರ ಚಳುವಳಿಗೆ ಗದಗ ಜಿಲ್ಲೆಯ ಕವಿಗಳ ಕೊಡುಗೆ' ಕುರಿತು, ಕನ್ನಡ ಪ್ರಾಧ್ಯಾಪಕ ಡಾ. ಎಚ್.ಬಿ. ಪೂಜಾರ 'ಸ್ವಾತಂತ್ರ್ಯ ಚಳುವಳಿಗೆ ಸಾಹಿತ್ಯಿಕ ಕೊಡುಗೆ' ಕುರಿತು, ಇತಿಹಾಸ ಪ್ರಾಧ್ಯಾಪಕ ಡಾ. ಎಚ್.ಬಿ. ಪೂಜಾರ 'ಕಿತ್ತೂರು ಕರ್ನಾಟಕದ ಆರಂಭಿಕ ಏಕೀಕರಣ ಚಳುವಳಿಗಳು ಮತ್ತು ಸಂಘಟನೆಗಳು' ಕುರಿತು ವಿಚಾರಗೋಷ್ಠಿ ನಡೆಸಲಿದ್ದಾರೆ.

ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯ ತಾಂತ್ರಿಕ ಅಧಿಕಾರಿ ನಾರಾಯಣ ಬಾಬು ಗೌರವ ಉಪಸ್ಥಿತಿ ವಹಿಸುವರು.

ಬೆಳಿಗ್ಗೆ 10.30 ಗಂಟೆಗೆ ಆಲೂರು ವೆಂಕಟರಾವ್ ವೇದಿಕೆಯಲ್ಲಿ ವಿಚಾರಗೋಷ್ಠಿ-8 ಜರುಗಲಿದೆ. ಕುರ್ತಕೋಟಿಯ ಸ.ಪ್ರ.ದ ಕಾಲೇಜಿನ ಪ್ರಾಂಶುಪಾಲರಾದ ಡಾ. ವೈ. ಆರ್. ಬೇಲೇರಿ ಅಧ್ಯಕ್ಷತೆ ವಹಿಸಲಿದ್ದಾರೆ.

ಸಂಪನ್ಮೂಲ ವ್ಯಕ್ತಿಗಳಾಗಿ ಕರ್ನಾಟಕ ವಿ.ವಿ ಗೌರವ ಉಪನ್ಯಾಸಕರಾದ ಡಾ.ಸಂಗಮೇಶ ಕಲ್ಯಾಣಿ 'ಮೋಡಿ ಲಿಪಿ ದಾಖಲೆಗಳಲ್ಲಿ ಗದಗ ಜಿಲ್ಲೆಯ ದೇಸಗತಿಗಳ ಚರಿತ್ರೆ' ಕುರಿತು, ರೋಣದ ಹಿರಿಯ ಜಾನಪದ ಕಲಾವಿದ ಶಂಕರಣ್ಣ ಸಂಕಣ್ಣವರ 'ಏಕೀಕರಣ ಚಳುವಳಿಯ ಲಾವಣಿಗಳು' ಕುರಿತು, ಸಿಂದಗಿ ಇತಿಹಾಸ ಸಂಶೋಧಕ ಡಾ. ಎಸ್.ಎಮ್. ವಿರಕ್ತಮಠ 'ಏಕೀಕರಣ ಚಳುವಳಿಯಲ್ಲಿ ಮುಂಬೈ ಕರ್ನಾಟಕ ಪಾತ್ರ' ಕುರಿತು, ಪ್ರಾದೇಶಿಕ ಪತ್ರಾಗಾರ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರಾದ ಮಂಜುಳಾ ಯಲಿಗಾರ 'ಪತ್ರಾಗಾರ ಇಲಾಖೆ ಸಂಗ್ರಹಿಸಿದ ಚಳುವಳಿಗಾರರ ಧ್ವನಿ ಇತಿಹಾಸ ಅನುಭವಗಳು' ಕುರಿತು ವಿಚಾರ ಗೋಷ್ಠಿ ನಡೆಸಲಿದ್ದಾರೆ.

ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಂ.ಎ. ರಡ್ಡೇರ ಗೌರವ ಉಪಸ್ಥಿತಿ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

## ಬೆಳೆಹಾನಿ ಪರಿಹಾರ ಕಲ್ಪಿಸಿ: ಸರ್ಕಾರಕ್ಕೆ ಮನವಿ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಮಳೆ ಕೊರತೆಯಿಂದ ಮುಂಗಾರು-ಹಿಂಗಾರು ಹಂಗಾಮಿನ ಬೆಳೆ ವೈಫಲ್ಯದ ಸಂಕಷ್ಟಕ್ಕೆ ಸಿಲುಕಿರುವ ರೈತ ಸಮುದಾಯಕ್ಕೆ ಬೆಳೆಹಾನಿ ಪರಿಹಾರ ಮತ್ತು ಬೆಳೆವಿಮೆ ಕಲ್ಪಿಸಬೇಕು ಎಂದು ಲಕ್ಷ್ಮೇಶ್ವರ ತಾಲೂಕ ಜಯ ಕರ್ನಾಟಕ ಜನಪರ ವೇದಿಕೆಯ ವತಿಯಿಂದ ಶನಿವಾರ ತಹಸೀಲ್ದಾರರ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಗದಗ ಜಿಲ್ಲೆಯನ್ನು ಈಗಾಗಲೇ ಬರಗಾಲ ಪೀಡಿತ ಪ್ರದೇಶವೆಂದು ಸರ್ಕಾರ ಘೋಷಣೆ ಮಾಡಿದೆ. ಆದರೆ ಇದುವರೆಗೂ ರೈತರ ಸಂಕಷ್ಟಕ್ಕೆ ಸ್ಪಂದಿಸುವ ಕೆಲಸವಾಗಿಲ್ಲ. ಬರಗಾಲದ ಸುಳಿಗೆ ಸಿಲುಕಿರುವ ರೈತರು ಬೆಳೆದ ಅಲ್ಪ ಬೆಳೆಗೆ ಉತ್ತಮ ಬೆಲೆಯೂ ಸಿಗದೇ ಕಷ್ಟದ ಪರಿಸ್ಥಿತಿಯಲ್ಲಿದ್ದಾರೆ. ಈ ವಿಷಯವನ್ನು ಮುಖ್ಯಮಂತ್ರಿಗಳು ಗಂಭೀರವಾಗಿ ಪರಿಗಣಿಸಿ ರೈತಪರ ಸೂಕ್ತವಾದ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಮನವಿಯಲ್ಲಿ ಒತ್ತಾಯಿಸಿದರು.

ತಹಸೀಲ್ದಾರ ವಾಸುದೇವ ಸ್ವಾಮಿ ಮನವಿ ಸ್ವೀಕರಿಸಿದರು. ಈ ವೇಳೆ ವೇದಿಕೆಯ ಜಿಲ್ಲಾಧ್ಯಕ್ಷ ಮಂಜುನಾಥ ಹೊಗೆಸೊಪ್ಪಿನ, ತಾಲೂಕಾಧ್ಯಕ್ಷ ರಮೇಶ ಹಂಗನಕಟ್ಟಿ, ಸದಾನಂದ ನಂದೆಣ್ಣವರ, ಕುಮಾರ ಬೆಟಗೇರಿ, ಮಂಜುನಾಥ ಮೂಲಿಮನಿ, ಸಂತೋಷ ರಾಡೋಡ, ಗೋಪಿ ನಾಯಕ, ನಾಗೇಶ ಲಮಾಣಿ, ಕಿರಣ ಲಮಾಣಿ, ಗಣೇಶ ಲಮಾಣಿ, ಗಿರೀಶ ಬಸಪ್ಪನವರ, ಮಾಂತೇಶ ಗಾಳೆಪ್ಪನವರ, ಹುಸೇನ ಹುಬ್ಬಳ್ಳಿ, ಮಾರುತಿ ಭಜಂತ್ರಿ, ಸದ್ದಾಂ ಹುಸೇನ ಮುಂತಾದವರಿದ್ದರು.

### ಬಾಲಕಿಯರ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ವಾರ್ಷಿಕೋತ್ಸವ

## ಮಕ್ಕಳಿಗೆ ನೈತಿಕ ಶಿಕ್ಷಣ ನೀಡಲು ಮುಂದಾಗಿ

■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಮಕ್ಕಳು ಈ ದೇಶದ ಸಂಪತ್ತು. ಮಕ್ಕಳ ಬೌದ್ಧಿಕ ವಿಕಾಸಕ್ಕೆ ಶಿಕ್ಷಕರ ಕೊಡುಗೆ ಅಪಾರವಾಗಿದೆ. ಈ ನಿಟ್ಟಿನಲ್ಲಿ ಶಿಕ್ಷಕರು ಜ್ಞಾನದೊಂದಿಗೆ ಮಕ್ಕಳಿಗೆ ನೈತಿಕ ಶಿಕ್ಷಣವನ್ನೂ ನೀಡಬೇಕು ಎಂದು ನಿಡಗುಂದಿ ಸರ್ಕಾರಿ ಪದವಿ ಕಾಲೇಜಿನ ಪ್ರಾಚಾರ್ಯ ಎಸ್. ಎಸ್. ಹಿರೇಮಠ ಹೇಳಿದರು.

ಅವರು ಪಟ್ಟಣದ ಬಾಲಕಿಯರ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯ 7ನೇ ವರ್ಗದ ವಿದ್ಯಾರ್ಥಿನಿಯರ ಬಿಳ್ಕೊಡುಗೆ ಹಾಗೂ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಶಿಕ್ಷಣದಲ್ಲಿ ವಿರಾಮವೆಂದರೆ ಕಾಲಹರಣವಲ್ಲ, ವಿದ್ಯಾಭ್ಯಾಸ ಕಾರ್ಯದ ಬದಲಾವಣೆಯಾಗಬೇಕು. ನಾವು ಮಾಡುವ ಪ್ರತಿಯೊಂದು ಕೆಲಸದಲ್ಲೂ ಕಲೆ ಇದೆ. ಆದರೆ, ಆ ಕಲೆಯನ್ನು ಕರಗತ ಮಾಡಿಕೊಳ್ಳುವ ಬಯಕೆ ಇರಬೇಕು. ಅಂದಾಗ ಮಾತ್ರ ಯಶಸ್ಸು ಸಾಧ್ಯ. ಪ್ರತಿಯೊಬ್ಬನೂ ಸುಶಿಕ್ಷಿತ ವಿದ್ಯಾರ್ಥಿಯಾಗುವದಿಲ್ಲ.



ಏಕೆಂದರೆ ಶಿಕ್ಷಣ ಒಂದು ಕಲೆಯಲ್ಲ. ಆದರೆ ನಾವು ಮಾಡುವ ವಿದ್ಯಾಭ್ಯಾಸದ ಕಾರ್ಯದಲ್ಲಿ ವಿಶೇಷತೆಯನ್ನು ಬಿಂಬಿಸುವಂತೆ ಕಾರ್ಯವಿರಬೇಕು ಎಂದರು.

ಸಿಆರ್‌ಪಿ ಕೆ.ಎಸ್. ವನ್ನಾಲ ಹಾಗೂ ಹೆಸ್ಕಾಂ ಕಾರ್ಯನಿರ್ವಾಹಕ ಇಂಜಿನಿಯರ್ ವಿರೇಶ ರಾಜೂರ ಮಾತನಾಡಿ, ವಿದ್ಯಾರ್ಥಿಗಳು ಉತ್ತಮ ಸಂಸ್ಕಾರಶೀಲರಾಗಿ, ಆಚಾರ-ವಿಚಾರ ಗುಣಗಳನ್ನು ರೂಢಿಸಿಕೊಳ್ಳಬೇಕು. ಪರೀಕ್ಷಾ ಸಮಯದಲ್ಲಿ ಎದೆಗುಂದದೇ ಸಮರ್ಥವಾಗಿ ಎದುರಿಸಲು ಮುಂದಾಗಬೇಕು ಎಂದರು.

ಶಾಲಾ ಪ್ರಧಾನಗುರು ಬಿ.ಎಂ. ಹಿರೇಮಠ ವಾರ್ಷಿಕ ವರದಿ ವಾಚನ ಮಂಡಿಸಿದರು. ಈ ವೇಳೆ ಮನೋಹರ ಕಾಟ್ವಾ, ಗೀತಾ ಸೂಡಿ, ಲೋಕೇಶ ನಿಡಗುಂದಿ, ಗೀತಾ ಮಾಳೋತ್ತರ, ರೂಪಾ ಕುಲಕರ್ಣಿ, ರುಬಿನಾ ಕೊಪ್ಪಳ, ಸುರೇಶ ಹಡಪದ ಹಾಗೂ ಶಿಕ್ಷಕರಾದ ಆಯ್.ವಿ. ಕರ್ಣಿ, ಎಸ್.ಎಚ್. ಬಾಗವಾನ ಟಿ.ಬಿ. ಸೋನಾರ, ಕೆ.ಎಚ್. ಕೊತಬಾಳ, ಡಿ.ಎಂ. ಬಡಿಗೇರ, ಆರ್.ಬಿ. ಬೆನಿವಾಡ ಮುಂತಾದವರು ಇದ್ದರು.

> ಯಶ್ ಅವರ ಕಟೌಟ್ ಕಟ್ಟುವ ವೇಳೆ ನಡೆದ ಘಟನೆಯಿಂದ ಆತ್ಮೀಯ ಗೆಳೆಯರ ಸಾವು ನಮ್ಮಲ್ಲಿ ನೋವನ್ನುಂಟು ಮಾಡಿದೆ. ಯಶ್ ಬಗ್ಗೆ ಅವರಿಗೆ ಅಪಾರವಾದ ಪ್ರೀತಿಯಿತ್ತು. ನಟ ಯಶ್ ಅವರು ಮೃತ ಗೆಳೆಯರ ಮನೆಗೆ ಭೇಟಿ ನೀಡಿ ಸಾಂತ್ವನ ಹೇಳಬೇಕು. ನವೀನ ಮತ್ತು ಮುರಳಿ ಪ್ರಾಣ ಸ್ನೇಹಿತರಾಗಿದ್ದರು. ಜೀವನುದ್ದಕ್ಕೂ ಒಂದಾಗಿದ್ದ ಅವರು ಸಾವಿನಲ್ಲೂ ಒಂದಾದರು. ಗೆಳೆಯರ ಕುಟುಂಬಕ್ಕೆ ಭಗವಂತ ನೋವು ಸಹಿಸುವ ಶಕ್ತಿ ಕೊಡಲಿ.
>
> - ಪ್ರಕಾಶ ಮ್ಯಾಗೇರಿ.
> ಗಾಯಾಳು ಯುವಕ.


**ಗದಗ-ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರ**

**ಪಿನ್ ಕೋಡ್ ನಂ. 582101. ದೂರವಾಣಿ: 08372-278003.**

**ಇ ಮೇಲ್: uda-gadag@hotmail.com**

ಸಂ: ನಅಪ್ರಾಗಬೆ/ಭೂ.ಉ.ಬ/ 00088/2023-24/1065 ದಿನಾಂಕ: 31-01-2024

**ಪ್ರಕಟಣೆ**

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವದೇನೆಂದರೆ, ಅರ್ಜಿದಾರರಾದ ಶ್ರೀ ವಿಶಾಲ ಲಕ್ಷ್ಮೀಕಾಂತ ಖಟವಟೆ ಮತ್ತು ವಿಕಾಸ ಲಕ್ಷ್ಮೀಕಾಂತ ಖಟವಟೆ ಈ ಕೆಳಕಂಡ ಜಮೀನನ್ನು ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿ ಸಲ್ಲಿಸಿರುತ್ತಾರೆ. ಈ ಭೂ ಉಪಯೋಗ ಬದಲಾವಣೆಯಿಂದ ಸ್ಥಳದಲ್ಲಿ ವಸತಿ ನಿವೇಶನಗಳನ್ನು ಮಾಡಲು ಉದ್ದೇಶಿಸಿರುತ್ತಾರೆ. ಸದರಿ ಜಮೀನಿನಲ್ಲಿ ವಸತಿ ನಿವೇಶನಗಳನ್ನು ರಚನೆ ಮಾಡುವದರಿಂದ, ಸಾರ್ವಜನಿಕರಿಗೆ ವಸತಿ ನಿವೇಶನಗಳು ಲಭ್ಯವಾಗುತ್ತವೆ. ಇದರಿಂದ ವಸತಿ ಸಮಸ್ಯೆ ಸ್ವಲ್ಪ ಮಟ್ಟಿಗೆ ಬಗೆಹರಿಯುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರಂತೆ ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಸಾರ್ವಜನಿಕರಿಂದ ಸಲಹೆ/ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ಈ ಪ್ರಕಟಣೆ ಆದ ದಿನಾಂಕದಿಂದ 15 (ಹದಿನೈದು) ದಿನಗಳೊಳಗಾಗಿ ಆಯುಕ್ತರು, ಗದಗ-ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರ, ಪಿ.ಬಿ. ರೋಡ ಗದಗ-582101. ಇವರಿಗೆ ಲಿಖಿತವಾಗಿ ಸಲ್ಲಿಸಲು ಕೋರಲಾಗಿದೆ. ಅವಧಿ ಮುಗಿದ ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

| ಅ.ನ | ಗ್ರಾಮ | ರಿ.ಸ.ನಂ | ಕ್ಷೇತ್ರ | ಮಹಾ ಯೋಜನೆ ಪ್ರಕಾರ ನಿಗಧಿಪಡಿಸಿದ ಭೂ ಉಪಯೋಗ | ಅರ್ಜಿದಾರರು ಬಯಸಿರುವ ಭೂ ಉಪಯೋಗ ಬದಲಾವಣೆ |
|---|---|---|---|---|---|
| 01 | ಅಡವಿ ಸೋಮಾಪೂರ | 8/*/8 | 01ಎಕರೆ -00ಗುಂಟೆ | ಕೃಷಿ ವಲಯ | ವಸತಿ |

ಸಹಿ/- ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ, ಗದಗ-ಬೆಟಗೇರಿ.

ವಾ.ಸಾ.ಇ/ಗದಗ/507/ದೇಶಪಾಂಡೆಪಬ್ಲಿಸಿಟಿ/2023-24


VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka